ಎಲ್ಲೆಡೆ ಒಂದು ಜಗತ್ತು. ಆದರೆ, ಮುಂಬಯಿಯಲ್ಲಿ ಎರಡು ಜಗತ್ತು. ನಮಗೆಲ್ಲ ಕಾಣುತ ಇರುವ ಒಂದು ಜಗತ್ತಿನಲ್ಲಿ ಸರಕಾರವಿದೆ, ನ್ಯಾಯಾಲಯವಿದೆ, ಪೊಲೀಸರಿದ್ದಾರೆ.

ಇಲ್ಲಿ ಟಿಕೆಟಿಲ್ಲದೆ ರೈಲಿನಲ್ಲಿ ಪ್ರಯಾಣಿಸಿದವರಿಗೆ ದಂಡ ವಿಧಿಸಲಾಗುತ್ತದೆ. ಹೊಟ್ಟೆಪಾಡಿಗಾಗಿ ಜೇಬು ಕತ್ತರಿಸುವ ಬೀದಿ ಬಾಲಕನನ್ನು ಕೈಗೆ ಕೋಳ ತೊಡಿಸಲಾಗುತ್ತದೆ. ರಸ್ತೆ ನಿಯಮ ಉಲ್ಲಂಘಿಸಿದ ಮುಗ್ಧ ಜನರನ್ನು ಕೋರ್ಟಿಗೆ ಎಳೆಯಲಾಗುತ್ತದೆ.

ಆದರೆ ಇದೇ ಮುಂಬಯಿ ರಸ್ತೆಗಳಲ್ಲಿ ನ್ಯಾಯಾಲಯದ ಅಂಗಳಗಳಲ್ಲಿ ಹಾಡುಹಗಲೇ ಜನರನ್ನು ಕೊಲ್ಲಲಾಗುತ್ತದೆ. ಕೊಲೆಗಡುಕರು ಯಾರ್ಯಾರು ಗೊತ್ತಿದ್ದರೂ ಆರಾಮಾಗಿ ಓಡುತ್ತಾರೆ. ಜನರ ಜತೆ ಪೊಲೀಸರು ಬೆಪ್ಪು ಅಡ್ಡಾಡಿ ಹಾಗೆ ನೋಡಿ ಬಾಯಿ ತೆರೆಯುತ್ತಾರೆ. ಇಲ್ಲಿಯೇ ವರ್ಷಕ್ಕೆ 1,000 ಕೋಟಿ ರೂ. ವ್ಯವಹಾರದ ಚಿನ್ನ ಮತ್ತು 500ಕೋಟಿ ರೂ. ವ್ಯವಹಾರದ ಮಾದಕ ವಸ್ತುಗಳ ಕಳ್ಳ ಸಾಗಾಣಿಕೆ ನಡೆಯುತ್ತದೆ. ಕಸ್ಟಮ್ಸ್ ಇಲಾಖೆ ಆಗಾಗ ಲಕ್ಷ ಮೌಲ್ಯದ ಚಿನ್ನ ಹಿಡಿದು ಪತ್ರಿಕೆಗಳ ಮುಖಪುಟಗಳಲ್ಲಿ ಸುದ್ದಿ ಮಾಡುತ್ತದೆ.

ಇದೇ ಮತ್ತೊಂದು ಜಗತ್ತು. ಅದ್ಭುತ, ರಕ್ತ ರಂಜಿತ ಪುಟಗಳ ಇತಿಹಾಸವುಳ್ಳ ಭೂಗತ ಜಗತ್ತು.

ಅಂದು ಸೆಪ್ಟೆಂಬರ್ 5, 1983. ಆತ ಅಮೀರ್ ಜಾದಾ. ಮುಂಬಯಿ ಭೂಗತ ಜಗತ್ತಿನ ಕುಖ್ಯಾತ ದಾದಾ. ಕೊಲೆ ಅಪರಾಧದಲ್ಲಿ ಬಂಧಿತನಾಗಿದ್ದ ಆತನನ್ನು ವಿಚಾರಣೆಗೆ ಸೆಷನ್ಸ್ ಕೋರ್ಟಿಗೆ ಪೊಲೀಸರು ದಿಗ್ಬಂಧನದಲ್ಲಿ ಕರೆತಂದಿದ್ದಾರೆ. ವಿಚಾರಣೆ ನಡೆಯುತ್ತಿದ್ದಂತೆ ಗುರಿಯಿಟ್ಟು ಬಂದ ಗುಂಡು ಅಮೀರ್‌ಜಾದನ ಎದೆ ಸೀಳುತ್ತದೆ. ನ್ಯಾಯಾಲಯವನ್ನೇ ಅಣಕಿಸುವಂತೆ ಆತನ ಅಂತ್ಯವಾಗುತ್ತದೆ.

ಹಾಡುಹಗಲ ಈ ಸಾಹಸ ಮಾಡಿದವನು ಡೇವಿಡ್ ಪರ್‌ದೇಶಿ. ತಪ್ಪಿಸುವ ಭರದಲ್ಲಿ ಆತ ಪೊಲೀಸರಿಗೆ ಸಿಕ್ಕಿಬೀಳುತ್ತಾನೆ. ಆದರೆ ಜೈಲಿನಿಂದ ತಪ್ಪಿಸಿಕೊಂಡು ಓಡುತ್ತಾನೆ. (ಆದರೆ ಪಾಕೋಡ್ ಸರ್ಕಲ್ ಗುಂಡಿನ ಕಾಳಗದ ಬಗ್ಗೆ ತನಿಖೆ ನಡೆಸುತ್ತಿರುವ ರಾಣೆ ಆಯೋಗದ ಮುಂದೆ ಸಬ್‌ಇನ್ಸ್‌ಪೆಕ್ಟರ್ ಮಧು ಜಂದೆ ನೀಡಿರುವ ಸಾಕ್ಷ್ಯದ ಪ್ರಕಾರ, ಪರ್‌ದೇಶಿಯನ್ನು ಬಾಬು ರೇಷಿಮ್ ನೇರವಾಗಿ ಪೊಲೀಸ್ ಠಾಣೆಗೆ ಬಂದು ಬಿಡಿಸಿಕೊಂಡು ಹೋಗಿದ್ದ ನಂತೆ.) ಇತ್ತೀಚೆಗೆ ಪರ್‌ದೇಶಿ ಮತ್ತೆ ಪೊಲೀಸರ ಕೈಗೆ ಸಿಕ್ಕಿದ್ದಾನೆ.

ಅಂದು ನವಂಬರ್ 21, 1988. ಆತ ಸತೀಶ್ ರಾಜೆ. ಮುಂಬಯಿ ಭೂಗತ ಜಗತ್ತನ್ನು ದುಬ್ಬಾಯಿಯಲ್ಲಿ ಕೂತು ಆಳುತ್ತಿರುವ ದೊರೆ ದಾವೂದ್ ಇಬ್ರಾಹಿಂನ ಮುಂಬಯಿ ಮುಖವಾಣಿ. ಪೊಲೀಸ್ ಮತ್ತು ಭೂಗತ ಜಗತ್ತಿನ ಸಂಪರ್ಕ ಕೊಂಡಿ. ಆತ ದಾವೂದನ ಕಿರಿಯ ತಮ್ಮ ನೂರಾನನ್ನು ನಾಗ್‌ಪಾಡದಲ್ಲಿ ಸಂಧಿಸಲು ಬುಲೆಟ್‌ಪ್ರೂಫ್ ಹೊಂಡಾದಲ್ಲಿ ಪ್ರಯಾಣಿಸಿದ್ದಾನೆ. ಬೈಕಲಾದ ಜೆ.ಜೆ. ಆಸ್ಪತ್ರೆ ಬಳಿ ಬಂದಾಗ ಸಿಗ್ನಲ್‌ನ ಕೆಂಪು ದೀಪ ಕಂಡು ಕಾರು ನಿಲ್ಲುತ್ತದೆ. ಆ ಕಾರು ಬೆನ್ನಟ್ಟಿ ಬಂದ ಹಿಂದಿನ ಕಾರಿನಿಂದ ನಾಲ್ವರು ಶಸ್ತ್ರಧಾರಿಗಳು ಹೊರಬರುತ್ತಾರೆ. ಸುತ್ತಿಗೆಯಲ್ಲಿ ಕಾರಿನ ಕನ್ನಡಿ ಒಡೆದು ರಾಜೆಯನ್ನು ಗುಂಡಿನ ಮಳೆಯಲ್ಲಿ ಅದ್ದಿ ಹಿಂದಿರುಗುತ್ತಾರೆ. ಸಿಗ್ನಲ್‌ನಲ್ಲಿ ಹಸಿರು ದೀಪ ಕಾಣುತ್ತದೆ. ವಾಹನಗಳ ಹಿಂದಿನ ಜತೆ ಕೊಲೆಗಡುಕರು ಮುಂದೆ ಸಾಗುತ್ತಾರೆ.

ಇದು ಇಲ್ಲಿನ ಭೂಗತ ಜಗತ್ತು. ಇದಕ್ಕೆ ಸುದೀರ್ಘ ಇತಿಹಾಸವೇನಿಲ್ಲ. 1920ರಲ್ಲಿ ಈ ಭೂಗತ ಜಗತ್ತಿನ ಮೊದಲ ಪ್ರಜೆಗಳಾದ ಪಠಾಣರು, ವಾಯುವ್ಯ ಗಡಿಪ್ರಾಂತ್ಯದಿಂದ ಉದ್ಯೋಗವನ್ನರಸುತ್ತ ಇಲ್ಲಿಗೆ ಬಂದರು. ಅವರಲ್ಲಿ ಕೆಲವರು ಟ್ಯಾಕ್ಸಿ ಚಾಲಕರಾದರೆ ಮತ್ತೆ ಕೆಲವರು ಕಾವಲುಗಾರರಾದರು. ಇನ್ನು ಹಲವರು ಮುಂಬಯಿಯ ಡಾಕ್‌ನಲ್ಲಿ ಸೇರಿಕೊಂಡರು. ಕೆಲವರು ಬಡ್ಡಿ ವ್ಯವಹಾರ ನಡೆಸಿದರು (ಈಗಲೂ ಇಲ್ಲಿ ಪಠಾಣರ ಸಾಲ ಮುಳುಗಿಸುವ ಧೈರ್ಯ ಯಾರಿಗಿದೆ?)

ಇದೇ ಕಾಲದಲ್ಲಿ ಮತ್ತೊಂದೆಡೆಯಿಂದ ಉತ್ತರ ಪ್ರದೇಶ ಮತ್ತು ರಾಜಸ್ಥಾನಗಳಿಂದ ಮುಸ್ಲಿಮರ ಆಗಮನವಾಯಿತು. ಅಶಿಕ್ಷಿತರಾದ ಈ ಬಡ ಮುಸ್ಲಿಮರು ಉದ್ಯೋಗಕ್ಕಾಗಿ ಅಲೆದಾಡುತ್ತ ಕಾಮಾಟಿಪುರ, ಅಗ್ರಿಪಾಡಗಳಲ್ಲಿ ಕಳ್ಳತನ, ಬೀದಿ ಜಗಳಗಳಲ್ಲಿ ನಿರತರಾದರು. ಈಗಿನ ಕುಖ್ಯಾತ ಚೋರ್‌ಬಜಾರ್ ಅಂದಿನಿಂದ ಪ್ರಾರಂಭವಾಯಿತು.

ಉತ್ತರದ ದೇಹದಾರ್ಢ್ಯದ ಪಠಾಣರು ಆಗಲೇ ಹೊಡೆದಾಟಕ್ಕೆ ಹೆಸರುವಾಸಿಯಾಗಿದ್ದರು. ಅವರು ಓಂ ಸಾಹುಕಾರರ ಜತೆ ಮಾದಕ ವಸ್ತುಗಳನ್ನು ಮುಂಬಯಿಗೆ ಪರಿಚಯಿಸಿದರು.

1947ರ ನಂತರ ಸ್ವತಂತ್ರ ಭಾರತದ ಸರಕಾರ ಹಲವಾರು ಗ್ರಾಹಕ ವಸ್ತುಗಳ ಜತೆಯಲ್ಲಿ ಚಿನ್ನದ ಆಮದನ್ನೂ ನಿಷೇಧಿಸಿತು. ಆ ಕಾಲದಲ್ಲಿ ಗೋವಾದಿಂದ ಮುಂಬಯಿಗೆ ವಿದೇಶಿ ಮದ್ಯ ಸಾಗಿಸುವ ಮೂಲಕ ಪ್ರಾರಂಭವಾದ ಕಳ್ಳಸಾಗಣಿಕೆ 1950ರಲ್ಲಿ ಚಿನ್ನಕ್ಕೆ ತಿರುಗಿತು.

ಆಲಂಜೇಬ್, ದಾವೂದ್, ಸಮದ್ ಖಾನ್ ಮತ್ತು ಅಮೀರ್ ಜಾದಾ



ಮುಂಬೈಯ ಭೂಗತ ಜಗತ್ತು

ಮುಂಬಯಿ ಭೂಗತ ಜಗತ್ತಿನ ಸಿಂಹಾಸನ ಆಕ್ರಮಿಸಲು ನಿತ್ಯ ಹೆಣಗಳು ಉರುಳುತ್ತಿವೆ. ಭಾರತದ ಹೆಬ್ಬಾಗಿಲು ಯುದ್ಧ ಭೂಮಿಯಾಗಿದೆ. ಸ್ಮಗ್ಲಿಂಗ್ 'ಪಿತಾಮಹ' ಹಾಜಿಮಸ್ತಾನ್ ಸಮಾಜ ಸುಧಾರಕನಾಗಿ ಪಾತ್ರ ಬದಲಾಯಿಸಿದ್ದಾನೆ. ಕರೀಂಲಾಲ ವೃದ್ಧಾಪ್ಯದಿಂದ ಸೋತು ವಿರಮಿಸಿದ್ದಾನೆ. ಆತನ ಪಠಾಣರ ತಂಡದ ಹೆಣಗಳುರುಳಿವೆ. 'ವರದಾ' ಹೃದಯಾಘಾತದಿಂದ ಸತ್ತಿದ್ದಾನೆ. ದೋಲಕಿಯಾ ಸೋದರರು ಗುಂಡಿಗೆ ಬಲಿಯಾಗಿದ್ದಾರೆ. ಈಗ ಉಳಿದಿರುವ ಏಕೈಕ ದೊರೆ ದಾವೂದ್. ಮುಂದೇನು?

ದುಬ್ಬಾಯಿಂದ ಚಿನ್ನದ ಬಿಸ್ಕತ್‌ಗಳನ್ನು ತುಂಬಿಕೊಂಡು ಬಂದ ಹಡಗುಗಳು ಅದನ್ನು ನಗರದ ವರ್ತಕರಿಗೆ ವಿತರಿಸಿ ಬೆಳ್ಳಿ ಮತ್ತು ಅಫೀಮನ್ನು ತುಂಬಿಕೊಂಡು ಹಿಂದಿರುಗುತ್ತಿದ್ದವು.

ಆಗಿನ ಕುಖ್ಯಾತ ಸ್ಮಗ್ಲರ್ ಹಾಲಿಬ್. ಆತನೇ ಇಂದಿನ ಕಳ್ಳಸಾಗಣಿಕೆದಾರರ ಪೀಳಿಗೆಗೆ ಆದರ್ಶ.

ದುಬ್ಬಾಯಿಂದ ಮುಂಬಯಿಗೆ ಚಿನ್ನ ರವಾನಿಸುತ್ತಿದ್ದವರಿಗೆ ಅದನ್ನಿಲ್ಲಿ ಸಂಗ್ರಹಿಸಿ ವಿತರಿಸಲು ಚುರುಕಿನ ಯುವಕರು ಬೇಕಿತ್ತು. ಆಗ ಅವರ ಕಣ್ಣಿಗೆ ಬಿದ್ದವ ಡಾಕ್‌ನಲ್ಲಿ ಮೂಟೆ ಹೊರುತ್ತಿದ್ದ ಬಡಕಲು ಶರೀರದ ಪಾದರಸದ ಚಾಲನೆಯ ಹಾಜೀ ಮಸ್ತಾನ್.

ಮುಂಬಯಿಯ ಕುಲಾಬ ಪ್ರದೇಶದಲ್ಲಿ ಲೈಟ್ ಹೌಸ್ ಬೆಳಕಿನ ಮರೆಯಲ್ಲಿ ಬರುತ್ತಿದ್ದ ದೋಣಿಗಳಿಂದ ಚಿನ್ನ ಪಡೆದು ಅಲ್ಲಿಂದ ಸಮುದ್ರದಲ್ಲಿಯೇ ದಕ್ಷಿಣಕ್ಕೆ ಹೋಗಿ ಸಂಬಂಧಿತರಿಗೆ ಅದನ್ನು ನೀಡಿ, ನಂತರ ನಗರದ ವರ್ತಕರಿಗೆ ವಿತರಿಸುವ ಕೆಲಸ ಮಸ್ತಾನ್ ಹಲವು ವರ್ಷಗಳ ಕಾಲ ಯಶಸ್ವಿಯಾಗಿ ನಿರ್ವಹಿಸಿದ. ಮುಂದೆ ಅದನ್ನು ಬೇರೆಯವರಿಂದ ಮಾಡಿಸಿ ಮಸ್ತಾನ್ ಗುಂಪಿನ ಒಡೆಯನಾದ. ಮಸ್ತಾನ್‌ಗೆ ಆಗ ಪ್ರಮುಖ ಪ್ರತಿಸ್ಪರ್ಧಿ ಡೋಂಗ್ರಿಯ ಜೇಬುಗಳ್ಳ ರಜ್ಜ.

1969ರಲ್ಲಿ ಹಾಜಿಮಸ್ತಾನ್ ಮತ್ತೊಬ್ಬ ಕುಳ ಯುಸೂಫ್ ಪಟೇಲ್ ಜತೆಸೇರಿ ಕಳ್ಳಸಾಗಣಿಕೆ ಕೂಟ ಕಟ್ಟಿಕೊಂಡು ಮಸ್ತಾನ್ ತಂದ ಚಿನ್ನಕ್ಕೆ ಪಟೇಲ್ ಬೆಲೆ ನೀಡಬೇಕು.

ಈ ವ್ಯವಹಾರದಲ್ಲಿ ಯುಸೂಫ್ ಪಟೇಲ್ ಮಸ್ತಾನ್‌ಗೆ ಮೋಸ ಚಿನ್ನ ನೀಡಿ ಲಕ್ಷಾಂತರ ರೂಪಾಯಿ ವಂಚಿಸಿದ. ದ್ವೇಷದ ಮೊದಲ ಕಿಡಿ ಹತ್ತಿಕೊಂಡಿತು. ಮೋಸಕ್ಕೆ ಪ್ರತೀಕಾರವಾಗಿ ಯುಸೂಫ್ ಪಟೇಲ್‌ನನ್ನು ಮುಗಿಸಲು ಮಸ್ತಾನ್ ಕುಖ್ಯಾತ ಕೊಲೆಗಡುಕರ ಒಡೆಯ ಕರೀಂಲಾಲ್‌ಗೆ ತಿಳಿಸಿದ. ಆಗ ನಡೆದ ಗುಂಡಿನ ದಾಳಿಯಲ್ಲಿ ಪಟೇಲ್ ಉಳಿದುಕೊಂಡರೂ ಆತನ ಇಬ್ಬರು ಅಂಗರಕ್ಷಕರು ಮೃತರಾದರು.

ಈ ಘಟನೆಯ ನಂತರ ಹಾಜೀ ಮಸ್ತಾನ್ ಕತ್ತಲ ಲೋಕದ ದೊರೆಯಾಗಿ ಮೂಡಿಬಂದ. ಸಾಲ ವಸೂಲಿಗೆ, ಮನೆ ಒಕ್ಕಲೆಬ್ಬಿಸಲು ಜನ 'ಮಸ್ತಾನ್ ಭಾಯಿ'ಗೆ ಮೊರೆ ಹೋಗತೊಡಗಿದರು. ಆತ 'ಸಮಾನಾಂತರ ಸರಕಾರ' ನಡೆಸತೊಡಗಿದ.

50ರ ದಶಕದಲ್ಲಿ ಮುಂಬಯಿಯಲ್ಲಿ ಕೇಳಿಬಂದ ಮತ್ತೊಂದು ಹೆಸರು 'ವರದಾಭಾಯಿ' ಎಂದೇ ಖ್ಯಾತನಾದ ವರದರಾಜ ಮುದಲಿಯಾರ್. ಭೂಗತ ಜಗತ್ತಿನ ಮೊದಲ ಹಿಂದೂ ದೊರೆ. ಮಸ್ತಾನನ ಸಹಚರನಾಗಿ ಜೀವನ ಪ್ರಾರಂಭಿಸಿದ ವರ್ದಾ ಮುಂದೆ ಕಳ್ಳಭಟ್ಟಿ, ವೇಶ್ಯಾವಾಟಿಕೆಗಳ ಮೂಲಕ ಕ್ಷಿಪ್ರ ಅವಧಿಯಲ್ಲಿ ಮೇಲಕ್ಕೇರಿದ. ಮಟುಂಗಾ ಈತನ ಮುಖ್ಯ ಕಾರ್ಯಕೇಂದ್ರ ಆಗಿತ್ತು.

1970ರ ದಿನಗಳಲ್ಲಿ ಮುಂಬಯಿ ಭೂಗತ ಜಗತ್ತಿನ ಮುಖ್ಯ ಪಾಳೆಗಾರರಲ್ಲಿ ಮಸ್ತಾನ್, ಪಟೇಲ್, ವರ್ದಾ, ಕರೀಂಲಾಲ್ ಪ್ರಮುಖರು.

ಈ ಜಗತ್ತಿಗೆ ಮೊದಲ ಲಗ್ಗೆ ಇಟ್ಟಿದ್ದು ದಿವಂಗತ ಪ್ರಧಾನಿ ಇಂದಿರಾಗಾಂಧಿ. 1974ರಲ್ಲಿ ತುರ್ತುಸ್ಥಿತಿಯ ಆಶೀರ್ವಾದದಿಂದ ಜನರ ಗಮನ ಬೇರೆಡೆ ಸೆಳೆಯಲು ಆಕೆಗೆ ಒಂದು ಸಾಹಸದ ಅಗತ್ಯವಿತ್ತು. ಆಗ ಕಣ್ಣಿಗೆ ಬಿದ್ದವರು ಕಳ್ಳಸಾಗಣಿಕೆದಾರರು. ಮಸ್ತಾನ್

ದಿನೇಶ್ ಅಮೀನ್ ಮಟ್ಟು

ಪಟೇಲ್, ವರ್ದಾ, ದೋಲಕಿಯ ಬಖಿಯಾ ಎಲ್ಲರೂ ಜೈಲು ಸೇರಿದರು.

ಜೈಲಿನಲ್ಲಿ ಈ ಕಳ್ಳಸಾಗಣಿಕೆದಾರರಿಗೆ "ಜ್ಞಾನೋದಯ" ಆಯಿತು. ಬಿಡುಗಡೆ ಹೊಂದಿದ ನಂತರ ಜೆ.ಪಿ. ಇದ್ದ ಆಸ್ಪತ್ರೆಗೆ ತೆರಳಿ ಮಸ್ತಾನ್, ಪಟೇಲ್ ಮಾತ್ರರು ಕಳ್ಳಸಾಗಣಿಕೆ ಕೈಬಿಡುವ ಪ್ರತಿಜ್ಞೆ ಮಾಡಿದರು. ಎಷ್ಟರ ಮಟ್ಟಿಗೆ ಅವರು ಪ್ರತಿಜ್ಞೆ ಉಳಿಸಿಕೊಂಡರೋ ತಿಳಿಯದು. ಆದರೆ ಈ ಘಟನೆ ಮಸ್ತಾನ್‌ಗೆ ಸಮಾಜದಲ್ಲಿ ಹೊಸ ಸ್ಥಾನ ಮಾನ ನೀಡಿತು. ರಾತ್ರಿ ಹಗಲಾಗುವುದರ ಒಳಗೆ ಮುಂಬಯಿಯ ಖ್ಯಾತ ಕಳ್ಳಸಾಗಣಿಕೆದಾರ ಸಮಾಜ ಸುಧಾರಕನಾದ. ಭೂಗತ ಜಗತ್ತಿನ ಅಪೂರ್ವ ವಿಸ್ಮಯಗಳಲ್ಲಿ ಇದೂ ಒಂದು.

ಮಸ್ತಾನ್ ಮತ್ತು ಪಟೇಲ್ ನಂತರ ಕಟ್ಟಡ ನಿರ್ಮಾಣಕ್ಕೆ ತೊಡಗಿ ಸಾಮಾಜಿಕ ಸ್ಥಾನ-ಮಾನ, ಹಣ, ಎರಡೂ ಗಳಿಸ ತೊಡಗಿದ್ದಾರೆ. ವ್ಯವಸ್ಥೆ ಗೊಳಿಸಿದ ಪ್ರತಿ ಸಮಾರಂಭಕ್ಕೂ ರಾಜಕೀಯ ಮತ್ತು ಚಿತ್ರರಂಗದ ತಾರೆಗಳು ಬಂದು ಹರಸಿ ಹೋಗುತ್ತಾರೆ.

ಈ 'ಪರಿವರ್ತನೆಗೆ' ಒಳಗಾಗದೆ ಹಳೆ ದಂಧೆಯನ್ನೇ ಕೊನೆ ವರೆಗೆ ಮುಂದರಿಸಿಕೊಂಡು ಹೋದ ವ್ಯಕ್ತಿ "ವರದಾ' ಮಟುಂಗಾ ಮತ್ತು ಮಧ್ಯ ಮುಂಬಯಿಯಾದ್ಯಂತ ಕಳ್ಳಭಟ್ಟಿಗಳನ್ನು ಹೊಂದಿದ ವರ್ದಾ ಮದ್ಯ ಸಾಗಿಸಲು ನೂರಾರು ಟ್ಯಾಕ್ಸಿಗಳನ್ನು ಹೊಂದಿದ್ದ. ಆ್ಯಂಟಪ್ ಹಿಲ್‌ನ ಕೊಳೆಗೇರಿಯನ್ನು ಕೇಂದ್ರ ಮಾಡಿಕೊಂಡ ವರ್ದಾ ಕಳ್ಳ ಸಾಗಾಣಿಕೆ, ಹಫ್ತಾ ವಸೂಲಿಯ ಬೃಹತ್ ಜಾಲವನ್ನೇ ಹೊಂದಿದ್ದ. ಇವುಗಳೆಲ್ಲವನ್ನು ಅವನಂತೆಯೇ ಮುಂಬಯಿಗೆ ಅನಾಥರಾಗಿ ಬಂದ ಯುವಕರು ನೋಡಿಕೊಳ್ಳುತ್ತಿದ್ದರು.

ಮಸ್ತಾನ್ ಮತ್ತು ಪಟೇಲ್ ಮಾಡಿದಂತೆ 'ಪರಿವರ್ತನೆ' ಯ ನಾಟಕ ಆಡದ ವರದರಾಜ ಮೊದಲಿಯಾರ್ ತನ್ನ ಕ್ರಿಮಿನಲ್ ಚಟುವಟಿಕೆಯ ಜತೆಯಲ್ಲಿಯೆ ಸಾಮಾಜಿಕ ಸ್ಥಾನಮಾನ ಗಳಿಸ ತೊಡಗಿದ. ಸಾಯನ್, ಕೋಳಿವಾಡ, ಮಟುಂಗಾ, ಕಿಂಗ್ಸ್ ಸರ್ಕಲ್ ಮತ್ತು ಧಾರಾವಿ ಪ್ರದೇಶಗಳಲ್ಲಿ ಯಾವುದೇ ಬೀದಿ ಹಲ್ಲೆ, ಕಳ್ಳತನ, ಕೊಲೆ ನಡೆದರೆ ಅದು ಮೊದಲು ಶೇಕ್ ಮಿಸ್ತ್ರಿ ರಸ್ತೆಯಲ್ಲಿರುವ "ವರದಾ" ನ ಕಚೇರಿಗೆ ತಲುಪುತ್ತಿತ್ತು. ನಂತರ ಪೊಲೀಸ್ ಠಾಣೆಗೆ. ಕೊಲೆ, ಸುಲಿಗೆ, ಸ್ಮಗ್ಲಿಂಗ್, ಕಳ್ಳಭಟ್ಟಿ, ವೇಶ್ಯಾವಾಟಿಕೆ, ಕಟ್ಟಡ ನಿರ್ಮಾಣ, ಸಾಲ ವಸೂಲಿ ಹೀಗೆ ಎಲ್ಲ ರೀತಿಯ ಕಾನೂನು ಬಾಹಿರ ಕೃತ್ಯಗಳನ್ನು ಎಗ್ಗಿಲ್ಲದೆ ನಡೆಸುತ್ತಿದ್ದ ವರದರಾಜನ ವಿರುದ್ಧ ಪೊಲೀಸರಿಗೆ ಒಂದೇ ಒಂದು ಕ್ರಿಮಿನಲ್ ದಾವೆ ಹೂಡಲಾಗಿಲ್ಲ.

ಪಂಜಾಬನ್ನು ನಡುಗಿಸಿದ ಜ್ಯೂಲಿಯೋ ರಿಬಿರೋ ಮುಂಬಯಿ ಪೊಲೀಸ್ ಕಮಿಷನರ್ ಆಗಿದ್ದಾಗ 'ವರದಾ' ನನ್ನು ಹತ್ತಿಕ್ಕಲು ಮಾಡಿದ ಎಲ್ಲ ಪ್ರಯತ್ನ ವಿಫಲವಾಗಿತ್ತು. ಮಟುಂಗಾ, ಕಿಂಗ್ಸ್ ಸರ್ಕಲ್, ಧಾರಾವಿ, ಮತ್ತು ಚೆಂಬೂರ್‌ಗಳಲ್ಲಿ ಚುನಾವಣೆಗೆ ನಿಲ್ಲುವ ಯಾವ ಅಭ್ಯರ್ಥಿಯೂ "ವರದಾ" ನ 'ಆಶೀರ್ವಾದ' ಇಲ್ಲದೆ ಗೆಲ್ಲುವ ಹಾಗಿಲ್ಲ.

1980ರಲ್ಲಿ ವಿ. ಸುಬ್ರಹ್ಮಣ್ಯ 'ವರದಾ' ಬೆಂಬಲದಲ್ಲಿಯೇ ಚುನಾವಣೆಯಲ್ಲಿ ಗೆದ್ದಿದ್ದರು. ಅವರು ನಂತರ ಹಣಕಾಸು ಸಚಿವರಾದರು. ಗುರುದಾಸ್ ಕಾಮತ್ ಪರ ವೈಯಕ್ತಿಕ ಪ್ರಚಾರ ನಡೆಸಿದ್ದೇನೆಂದೂ ಆತ ಹೇಳಿಕೊಂಡಿದ್ದ.

ಈತನ ಬೆನ್ನು ಹತ್ತಿದ ಡಿಸಿಪಿ ವೈ. ಸಿ. ಪವಾರ್ ಹಲವಾರು ಅಪಾದನೆಗೊಳಗಾಗಬೇಕಾಯಿತು. ಕೊನೆಯ ಹಂತದಲ್ಲಿ ಪೊಲೀಸರ ಬೇಟೆಯಿಂದ ತಪ್ಪಿಸಿಕೊಳ್ಳಲಾಗದೆ. ಮದ್ರಾಸಿಗೆ ಓಡಿಹೋದ 'ವರದಾ' ಅಲ್ಲೇ ಹೃದಯಾಘಾತದಲ್ಲಿ ತೀರಿಕೊಂಡ. ಈ ವರೆಗೆ ಸಹಜ ಸಾವು ಕಂಡ ಭೂಗತ ಜಗತ್ತಿನ ಏಕೈಕ ವ್ಯಕ್ತಿ 'ವರದಾ'.

ಹಾಜಿಮಸ್ತಾನ್ ಅನಧಿಕೃತ ನಿರ್ಗಮನದ ನಂತರ ಮುಂಬಯಿ ಭೂಗತ ಜಗತ್ತಿನಲ್ಲಿ ಭಾರೀ ಬದಲಾವಣೆಗಳಾಗಿವೆ. ಮುಸ್ಲಿಮರ ಏಕಸ್ವಾಮ್ಯವಿದ್ದ ಈ ಕ್ಷೇತ್ರಕ್ಕೆ ಇತರ ಸಮುದಾಯದ ಜನ ಕೂಡಾ ಲಗ್ಗೆ ಇಡತೊಡಗಿದ್ದಾರೆ. ಹಣದ ಹೊಳೆ ಹರಿಯುತ್ತಿದೆ.

ಮಸ್ತಾನ್ ಕೇವಲ ನೂರು ರೂಪಾಯಿಗಾಗಿ ಜೀವ ಒತ್ತೆ ಇಟ್ಟು ಒಂದು ಜಾಕೆಟ್ ಚಿನ್ನ ಸಾಗಿಸುತ್ತಿದ್ದ. ಈಗ ಒಂದು ಕ್ಷಣದ ಕೊಲೆಗೆ 10-20 ಲಕ್ಷ ಎಸೆಯುತ್ತಾರೆ.

ಈಗ ಮುಂಬಯಿ ಭೂಗತ ಜಗತ್ತಿನ ಅನಭಿಷಿಕ್ತ ದೊರೆ 33 ರ ಹರೆಯದ ದಾವೂದ್ ಇಬ್ರಾಹಿಂ 'ಡಿ' ಕಂಪೆನಿಯೆಂದೇ ಖ್ಯಾತಿ ಪಡೆದ ಈತನ ಕೂಟವೇ ಇಲ್ಲಿನ ಭೂಗತ ಚಟುವಟಿಕೆಗಳನ್ನು ನಿಯಂತ್ರಿಸುತ್ತಿದೆ. 'ದೊರೆ' ದಾವೂದ್ ದುಬ್ಬಾಯಿಯಲ್ಲಿ ಕೂತು ಮೇಲ್ವಿಚಾರಣೆ ಮಾಡಿಕೊಳ್ಳುತ್ತಿದ್ದಾನೆ. ಅಪಾಯ ಸುರಕ್ಷಿತ ಎಂದು ಕಂಡು ಬಂದಲ್ಲಿ ತನ್ನ ಸ್ಪೀಡ್‌ಬೋಟಲ್ಲಿ ಮುಂಬಯಿಗೆ ಬಂದು ಪೊಲೀಸರ ಅನಧಿಕೃತ ಭದ್ರತೆಯಲ್ಲಿ ತಿರುಗಿ ಮರಳುತ್ತಾನೆ

ಹದಿನೈದು ವರ್ಷದ ಬಾಲಕನಾಗಿದ್ದಾಗಲೇ ಈತ ಭೂಗತ ಜಗತ್ತಿಗೆ ಪರಿಚಿತ. ಈತನ ತಂದೆ ಇಬ್ರಾಹಿಂ ಕಸ್ಕರ್ ಮಾಜಿ ಸಿಐಡಿ ಕಾನ್‌ಸ್ಟೇಬಲ್. ಮಸ್ತಾನ್‌ಗಾಗಿ ಸಣ್ಣಪುಟ್ಟ ಕೆಲಸ ಮಾಡಿಕೊಡುತ್ತಿದ್ದ. ಈತನ ಇಬ್ಬರು ಹದಿಹರೆಯದ ಮಕ್ಕಳಾದ ಸಬೀರ್ ದಾವೂದ್ ಸ್ಮಗ್ಲಿಂಗ್ ವಸ್ತುಗಳನ್ನು ಮನೀಷ್ ಮಾರ್ಕೆಟಲ್ಲಿ ಮಾರುತ್ತಿದ್ದರು. ಆಗಲೇ ಅವರ 'ದಾದಾಗಿರಿ'ಯ ಖ್ಯಾತಿ ಹರಡಿತ್ತು.

ಸನಿಹದ ಬೇಂಡಿಬಜಾರ್‌ನಲ್ಲಿನ ಮುಸಾಫಿರ್ ಖಾನಾದ ಮಾಲೀಕ ಅಗತ್ಯಬಿದ್ದಾಗಲೆಲ್ಲ 'ಗೂಂಡಾಗಿರಿ'ಗೆ ಇಬ್ರಾಹಿಂ ಸೋದರರಿಗೆ ಕರೆ ಕಳುಹಿಸುತ್ತಿದ್ದ. 1975ರ ಸುಮಾರಿಗೆ ಮುಸಾಫಿರ್‌ಖಾನವನ್ನು ಆಕ್ರಮಿಸಿಕೊಂಡ ಸ್ಥಳೀಯ ಗ್ಯಾಂಗೊಂದನ್ನು ಓಡಿಸುವ ಕೆಲಸ ಈ ಸೋದರರು ಒಪ್ಪಿಕೊಂಡರು. ಆಗ ಅವರ ಜತೆಗಿದ್ದವರು ಮಹಮ್ಮದ್ ಕಾಲ್ಯ ಮತ್ತು ಖಾಲಿದ್ ಪೈಲ್ವಾನ್.

ಮುಸಾಫಿರ್‌ಖಾನವನ್ನು ಆಕ್ರಮಿಸಿಕೊಂಡ ಇಬ್ರಾಹಿಂ ಸೋದರರಿಗೆ ಇದಿರಾದದ್ದು. ಆ ಪ್ರದೇಶದಲ್ಲಿ ನೆಲೆ ಹೊಂದಿದ್ದ ಡೋಂಗ್ರಿದೊರೆ ಕರೀಂಲಾಲ ನೇತೃತ್ವದ ಪಠಾಣರ ತಂಡ. ಇಬ್ರಾಹಿಂ ಸೋದರರೊಂದಿಗೆ ಆಗಾಗ ಪಠಾಣರ ತಂಡದ ಸೈಯದ್ ಬಟ್ಟ, ಅಮೀರ್‌ಜಾದಾ, ಆಲಮ್‌ಜೇಬ್ ಅವರ ಮುಖಾಮುಖಿಯಾಗಿ ಘರ್ಷಣೆಯಲ್ಲಿ ಕೊನೆಗೊಳ್ಳುತ್ತಿತ್ತು.

ಈ ದಿನದವರೆಗೂ ಕೊನೆಕಾಣದ ಭೂಗತ ಜಗತ್ತಿನ ಕೊಲೆಗಳ ಸರಪಣಿ ಪ್ರಾರಂಭವಾದದ್ದು 1977 ರಲ್ಲಿ. ಸ್ಥಳೀಯ ಉರ್ದು ಪತ್ರಿಕೆ 'ರಜ್‌ದಾರ್'ನ ವರದಿಗಾರ ಇಕ್ಬಾಲ್ ನಾಟಿಕ್ ಇಬ್ರಾಹಿಂ ಸೋದರರಚಿತಾವಣೆ ಮೇಲೆ ಕರೀಂಲಾಲ ತಂಡದವರ ಬಗ್ಗೆ ಪೊಲೀಸರಿಗೆ ಮಾಹಿತಿ ನೀಡಿ ಪತ್ರಿಕೆಯಲ್ಲಿ ಬರೆದ. ಅದನ್ನನುಸರಿಸಿ ಕರೀಂಲಾಲ ತಂಡದ ಕೆಲವರ ದಸ್ತಗಿರಿ ಆಯಿತು.

ಬಿಡುಗಡೆಯಾಗಿ ಹೊರಬಂದವರೇ ಕರೀಂಲಾಲಿನ ಸಹಚರರಾದ ಬಟ್ಟ, ಆಲಮ್‌ಜೇಬ್ ಮತ್ತು ಅಮೀರ್‌ಜಾದ ತಮ್ಮನ್ನು ಬಂಧಿಸಿದ ಸ್ಥಳಕ್ಕೆ ಪತ್ರಕರ್ತ ನಾಟಿಕ್‌ನನ್ನು ಎಳೆದೊಯ್ದು ಕಡಿದು ಕೊಂದರು. ಇದಕ್ಕೆ ಪ್ರತೀಕಾರವಾಗಿ ಶಬೀರ್ ಮತ್ತು ದಾವೂದ್ ಬಟ್ಟನ ಕಾಲು ಕಡಿದು ಹಾಕಿದರು. ಪೊಲೀಸರು ತಕ್ಷಣ ಅವರನ್ನು ಬಂಧಿಸಿದರು.

(ಮೂರನೆ ಪುಟಕ್ಕೆ)

ಆಧುನಿಕ ಕುಬೇರ

ಯಮನೊಬ್ಬನನ್ನು ಬಿಟ್ಟು ಉಳಿದ ಎಲ್ಲರನ್ನು ಖರೀದಿಸುವ ಸಾಮರ್ಥ್ಯ ಪಡೆದ ಕುಬೇರ ದಾವೂದ್ ಇಬ್ರಾಹಿಂಗೆ ಈಗ ಕೇವಲ 33ರ ಹರೆಯ. ಇತ್ತೀಚೆಗಷ್ಟೆ ಆತ ಒಂದು ಗಂಡು ಮಗುವಿನ ತಂದೆಯಾಗಿದ್ದಾನೆ.

ಭಾರತದ ಕರಾವಳಿಯನ್ನು ಒಂದು ವರ್ಷ ತನಗೆ ಮುಕ್ತವಾಗಿ ನೀಡಿದರೆ ಸಂಪೂರ್ಣ ವಿದೇಶಿ ಸಾಲವನ್ನೆಲ್ಲ ತೀರಿಸುವುದಾಗಿ ಕೆಲವು ವರ್ಷಗಳ ಹಿಂದೆ ದಾವೂದ್, ಪ್ರಧಾನಿ ಇಂದಿರಾ ಗಾಂಧಿಗೆ ಹೇಳಿದ್ದನಂತೆ. ಆತನ ವ್ಯವಹಾರವನ್ನು ಕಂಡ ಯಾರಿಗೂ ಇದು ಅಸಾಧ್ಯವೆನಿಸಲಾರದು.

ಕೊಂಕಣದ ರತ್ನಗಿರಿ ಜಿಲ್ಲೆಯ ರೈತ ಕುಟುಂಬದಿಂದ ಬಂದ ದಾವೂದ್ ಮುಂಬಯಿಗೆ ಬಂದಿದ್ದು ತಂದೆಯ ಬೆನ್ನು ಹತ್ತಿ. ಮುಂಬಯಿಯ ಜೆ. ಜೆ. ಆಸ್ಪತ್ರೆ ಬಳಿ ವಾಸಿಸುತ್ತಿದ್ದ ಈತನ ಕುಟುಂಬ ಈಗ ಚೆಲ್ಲಾಪಿಲ್ಲಿಯಾಗಿದೆ. ತಂದೆ ಪೊಲೀಸ್ ಇಲಾಖೆಯ ಕೆಲಸ ಬಿಟ್ಟು ಮಸ್ತಾನ್ ಜತೆ ಸೇರಿಕೊಂಡ. 6 ಮಂದಿ ಗಂಡು ಮಕ್ಕಳು ಆತನನ್ನು ಅನುಸರಿಸಿದರು.

ಬೇಂಡಿಬಜಾರ್ ಸಮೀಪದ ಮುಸ್ಲಿಂ ಯಾತ್ರಿಕರ ವಾಸಕ್ಕಾಗಿದ್ದ ಮುಸಾಫಿರ್‌ಖಾನ್‌ವನ್ನು ಆಕ್ರಮಿಸಿಕೊಂಡ ನಂತರ ಅದೇ ಕಟ್ಟಡ ಇಂದಿಗೂ ಇಬ್ರಾಹಿಂ ಸೋದರರ ಮುಖ್ಯ ನೆಲೆಯಾಗಿದೆ. ಸುತ್ತಲಿನ ಬೀದಿಗಳಲ್ಲಿನ ಅಂಗಡಿ ಮಾಲೀಕರೆಲ್ಲ ಯಾವಾಗಲೋ ಅಂಗಡಿ ಮುಚ್ಚಿ ಪರಾರಿಯಾಗಿದ್ದಾರೆ. ಅಪರಿಚಿತರು ಬೀದಿಯಲ್ಲಿ ಕಾಣಿಸಿಕೊಂಡ ಕ್ಷಣ ಜಾಗೃತ ಕಣ್ಣುಗಳು ಅವರನ್ನು ಹಿಂಬಾಲಿಸುತ್ತವೆ. ಆಕಸ್ಮಾತ್ ಅಲ್ಲಿಗೆ ಕಾಲಿರಿಸಿದ ಹೆಣ್ಣುಗಳು ಮಾನ, ಪ್ರಾಣ ಮುಷ್ಟಿಯಲ್ಲಿಟ್ಟು ಮರೆಯಾಗುತ್ತಾರೆ.

(ಮೂರನೆ ಪುಟಕ್ಕೆ)

ಚಿತ್ರರಂಗದ ಹಾದರ



ಹಿಂದೊಂದು ಕಾಲವಿತ್ತು. ಸಿನಿಮಾ ಸೇರಲು ಬಂದ ಯುವಕ-ಯುವತಿಯರು ಮುಂಬಯಿಯಲ್ಲಿ ನಿರ್ಮಾಪಕರ ಮನೆಮುಂದೆ, ಸ್ಟುಡಿಯೋ ಬಾಗಿಲುಗಳಲ್ಲಿ ಸಾಲುಗಟ್ಟಿ ಕಾಯುತ್ತಿದ್ದ ಕಾಲ. ಈಗ ಕಾಲ ಬದಲಾಗಿದೆ. ಈಗ ಸಿನಿಮಾ ಸೇರಬಯಸುವ ಯುವಕ ಯುವತಿಯರು ದುಬ್ಬಾಯಿಗೆ ಟಿಕೆಟ್ ಕೊಳ್ಳುತ್ತಾರೆ.

ದಾವೂದ್ ಭಾಯಿಯ ಒಂದು ಫೋನ್ ಕರೆ ಏನಾದರೂ ಮಾಡಬಲ್ಲದು. ಯಾವ ಚಿತ್ರದಲ್ಲಿ ಅನಿಲ್‌ಕಪೂರ್ ನಾಯಕನಾಗಬೇಕು? ಯಾವ ಚಿತ್ರದಲ್ಲಿ ಮಂದಾಕಿನಿ ನಾಯಕಿಯಾಗಬೇಕು ಎಂಬುದನ್ನು ದುಬ್ಬಾ ಫೋನ್ ಕರೆ ನಿರ್ಧರಿಸುತ್ತದೆ. ನಿರ್ಮಾಪಕರು ಬಾಲ ಮುದುರಿಸಿಕೊಂಡು ಅದನ್ನು ಶಿರಸಾವಹಿಸುತ್ತಾರೆ. ಕಾರಣ, ಚಿತ್ರರಂಗದಲ್ಲಿ ಕೊಳೆಯುತ್ತಿರುವ ಕಪ್ಪು ಹಣದ ಹೊಳೆ ಹರಿಯುವುದು ಭೂಗತ ಜಗತ್ತಿನಿಂದ. ರಾಜೇಶ್‌ಖನ್ನಾನ ಮಾಜಿ ಪ್ರೇಯಸಿ ಟೀನಾ ಮುನಿಮ್ ಇತ್ತೀಚೆಗೆ ದಾವೂದ್ ನೆರವಿನಿಂದ ವಿದೇಶದಲ್ಲಿ ಬ್ಯಾಂಕ್ ಖಾತೆ ತೆರೆದು ಸುದ್ದಿ ಮಾಡಿದ್ದು ಹೀಗೆಯೇ.

ಭೂಗತ ಜಗತ್ತಿನ ಜತೆ ಚಿತ್ರರಂಗದ ನಂಟು ಇಂದು ನಿನ್ನೆಯದಲ್ಲ. ಅದು ಹಾಜಿಮಸ್ತಾನನ ಕಾಲದಿಂದಲೇ ನಡೆದುಕೊಂಡು ಬಂದಿದೆ. ಮಸ್ತಾನನ ಪ್ರತಿಷ್ಠೆಯ ಪ್ರಾರಂಭದಲ್ಲಿ ಈಗಲೂ ಚಿತ್ರತಾರೆಯರು ಮಿಂಚುತ್ತಿರುತ್ತಾರೆ. ತನ್ನ 'ಮನಃಪರಿವರ್ತನೆ'ಯ ನಂತರ ಆತನೇ ಪಾತ್ರವಹಿಸಿದ್ದ ಚಿತ್ರವೊಂದನ್ನು ತಯಾರಿಸಲು ಹಿಂದಿನ ಖ್ಯಾತ ಸಾಹಿತಿ ಮುಶ್ರಿ ತಯಾರಿ ನಡೆಸಿದ್ದ. ಆಮೇಲೆ ಅದನ್ನೇ ಕಥೆ ಎಂದು ಪ್ರಚಾರಗೊಳಿಸಲಾದ ಅಮಿತಾಬ್ ನಾಯಕತ್ವದ ದೀವಾರ್ ಬಿಡುಗಡೆ ಆಯಿತು. 'ದೀವಾರ್' ನ ನಾಯಕ ಕೂಡಾ ಪ್ರಾರಂಭದಲ್ಲಿ ಡಾಕ್‌ನಲ್ಲಿ ಕೂಲಿಕೆಲಸ ಮಾಡುತ್ತಿದ್ದ ಎನ್ನುವ ಅಂಶ ಹೊರತುಪಡಿಸಿದರೆ ಚಿತ್ರದ ಬೇರೆ ಯಾವ ಭಾಗವು ಮಸ್ತಾನ್ ಬದುಕಿನದ್ದಲ್ಲ.

ಭೂಗತ ದೊರೆ ದಾವೂದ್‌ನ ಅಣ್ಣ ಇಬ್ರಾಹಿಂ ಕಸ್ಕರ್, ಹಮೀದ್ ಕಾಲ್ಯಾ ಎಂಬುವನ ಜತೆ ಸೇರಿ 'ಸಾತ್ ಸಾಲ್ ಬಾದ್' ಎಂಬ ಚಿತ್ರ ನಿರ್ಮಿಸಿದ್ದ. ಇದೀಗ ದಾವೂದ್ ಜೀವನ ಚರಿತ್ರೆ ಆಧರಿಸಿದ ಚಿತ್ರ ತಯಾರಿಸಲು ತಯಾರಿ ನಡೆದಿದೆ. ಕೆಲವು ವರ್ಷಗಳ ಹಿಂದೆ ಬಿಡುಗಡೆಗೊಂಡ ಸನ್ನಿ ದಿಯೋಲ್ ಡಿಂಪಲ್ ಪಾತ್ರಗಳದ 'ಅರ್ಜುನ್' ಮುಂಬಯಿಯ ಭೀಕರ ಕೊಲೆಗಡುಕ ಸಮರ್ ಖಾನ್ ಬದುಕನ್ನಾದರಿಸಿದ್ದು ಎಂಬ ಪ್ರಚಾರ ಹಬ್ಬಿತ್ತು. ಅದಕ್ಕೆಂದೇ ಸುರಿಯುವ ಮಳೆಯಲ್ಲಿಯೇ ಹಾಡುಹಗಲೇ ಜನಸಂದಣಿಯ ನಡುವೆ ಕೊಲೆಯ ದೃಶ್ಯ ಅಳವಡಿಸಲಾಗಿತ್ತು.

ಇತ್ತೀಚೆಗೆ ಆಸ್ಕರ್ ಪ್ರಶಸ್ತಿಗೆ ಆಯ್ಕೆಯಾದ 'ನಾಯಗನ್' ತಮಿಳು ಚಿತ್ರ ವರದರಾಜ್ ಮೊದಲಿಯಾರ್ 'ಬದುಕಿನ ಸತ್ಯಕತೆ' ಎಂದು ಪ್ರಚಾರ ಮಾಡಲಾಗಿತ್ತು. ಅನಾಥ ಬಾಲಕನಂತೆ ಓಡಿಬಂದು ಮುಂಬಯಿಯಲ್ಲಿ ಆಶ್ರಯ ಪಡೆದದ್ದು, ಆತ ನಡೆಸಿದ ಗಣೇಶೋತ್ಸವ, ಅದಕ್ಕೆ ಪೊಲೀಸ್ ಸಬ್‌ಇನ್ಸ್‌ಪೆಕ್ಟರನೊಬ್ಬನ ಅಡ್ಡಿ, ಜನಸೇವೆ, ಆತನ 'ಮ್ಯಾನರಿಸಂ'ಗಳು—ಈ ಅಂಶಗಳನ್ನು ಚಿತ್ರ ವೈಭವೀಕರಿಸದೆ ಹೊರತು, ಆತ ಮುಗ್ಧ ಹೆಣ್ಣು ಮಕ್ಕಳನ್ನು ಕೂಡಿ ಹಾಕಿ ನಡೆಸುತ್ತಿದ್ದ ವೇಶ್ಯಾವಾಟಿಕೆ, ಕಳ್ಳಭಟ್ಟಿ ಕೊಲೆ-ಸುಲಿಗೆಗಳ ಚಿತ್ರಣವನ್ನು ತಪ್ಪಿಯೂ ಸೇರಿಸಿಲ್ಲ. 'ವರ್ದಾ'ನ ನಿಜ ಬದುಕು ವೇಶ್ಯಾವಾಟಿಕೆ ಮತ್ತು ಕಳ್ಳಭಟ್ಟಿಯಿಂದಲೇ ತುಂಬಿ ಹೋಗಿತ್ತು. ಆತನ ತಂದೆಯನ್ನು ಯಾರೂ ಗುಂಡಿಕ್ಕಿ ಕೊಂದಿಲ್ಲ. ಆತನ ಮಕ್ಕಳು ಈಗ 'ವರ್ದಾ' ಸಾಮ್ರಾಜ್ಯವನ್ನು ಹಾಯಾಗಿ ಮುಂದರಿಸಿಕೊಂಡು ಹೋಗುತ್ತಿದ್ದಾರೆ. ಯಾರೂ ಕೊಲೆಯಾಗಿಲ್ಲ. ಕನಸುಗಳನ್ನು ಮಾರುವ ಸಿನೆಮಾಲೋಕ ಮುಗ್ಧಜನರನ್ನು ದಾರಿ ತಪ್ಪಿಸುವ ಮಾದರಿ ಇದು.

ಚಿತ್ರಜಗತ್ತು ಭೂಗತಜಗತ್ತಿನೊಂದಿಗೆ ನಡೆಸುತ್ತಿರುವ ಹಾದರಕ್ಕೆ ಇತ್ತೀಚೆಗೆ ದಾವೂದ್ ತನ್ನ ಏಕೈಕ ಗಂಡು ಮಗು ಇಬ್ರಾಹಿಂ ಅನೀಶ್‌ನ ಮೊದಲನೇ ಹುಟ್ಟುಹಬ್ಬವನ್ನು ದುಬ್ಬಾಯಿಯಲ್ಲಿ ಆಚರಿಸಿದ ಸಮಾರಂಭ ಸಾಕ್ಷಿ.

ದುಬ್ಬಾಯಿನಲ್ಲಿ ನಡೆದ ಈ ಸಮಾರಂಭಕ್ಕೆ ಅನಿಲ್‌ಕಪೂರ್ ಮಿಥುನ್, ಚಕ್ರವರ್ತಿ, ಜಾಕಿಶ್ರಾಫ್, ವಿನೋದ ಮೆಹ್ರಾ, ಗೋವಿಂದ, ಫರಾ, ಮಂದಾಕಿನಿ, ಟೀನಾ ಮುನೀಮ್ ಹೀಗೆ ಚಿತ್ರಜಗತ್ತಿನ ಗಂಡುಗಳು ಹಾಗೂ ಹೆಣ್ಣುಪೇಂಟೆಗಳ ಹಿಂಡೇ ದಾವೂದ್ ಪಾರ್ಟಿನಲ್ಲಿ ಹಾಜರಾಗಿತ್ತು.

ಈ ಮೂರು ಗಂಟೆಗಳ ಈ ದುಬ್ಬಾಯಿನ ಖ್ಯಾತ ಹೊಟೇಲೊಂದರಲ್ಲಿ ನಡೆದ ಈ ಸಮಾರಂಭಕ್ಕೆ ದಾವೂದ್ ಎಸೆದ ಹಣ ಕೇವಲ 20ಲಕ್ಷ ರೂಪಾಯಿ!

ಹೆಣ್ಣು, ಹೊನ್ನು, ಮಣ್ಣಿನ ನಶೆಯಲ್ಲಿ....

ಮುಂಬಯಿ ಭೂಗತ ಜಗತ್ತನ್ನು ಇಂದಿಗೂ ನಿಯಂತ್ರಿಸುತ್ತಿರುವುದು ನಮ್ಮ ಪಾರಂಪರಿಕ ದೌರ್ಬಲ್ಯಗಳಾದ ಹೆಣ್ಣು, ಹೊನ್ನು, ಮಣ್ಣು.

ಕಾಮಾಟಿಪುರದ ಬೀದಿಗಳಲ್ಲಿ ಮಾತ್ರ ವೇಶ್ಯೆಯರಿದ್ದಾರೆ ಎಂದು ಹೇಳುವವರು ಮುಂಬಯಿಯನ್ನು ಅರ್ಥೈಸಿದ ಜನ ಮಾತ್ರ. ನಿಜಚಿತ್ರ ಬೇಕಿದ್ದರೆ ಇಲ್ಲಿನ ಸ್ಟಾರ್ ಹೊಟೇಲ್‌ಗಳ 'ಡಿಸ್ಕೊ'ಕೇಂದ್ರಗಳಿಗೆ, ಬಂಗ್ಲೆಗಳಲ್ಲಿಯೇ ಇರುವ ಖಾಸಗಿ ಕೋಣೆಗಳಿಗೆ ಹೊಕ್ಕು ಬರಬೇಕು. ನಗರದ ಪ್ರತಿಷ್ಠಿತರಿಗೆಲ್ಲ ಪೂರೈಕೆಯಾಗುವ ಷೋಡಶಿಯರೆಲ್ಲರ 'ತವರು ಮನೆ' ಇರುವುದು ಇಲ್ಲಿಯೇ. ಕಪ್ಪು ಹಣದ ಹೊಳೆ ಹರಿಯುವುದು ಇಲ್ಲಿ. ಭೂಗತ ಜಗತ್ತಿನ ಎಲ್ಲ ಅಕ್ರಮ ವ್ಯವಹಾರಗಳು ಇಲ್ಲಿನ ವೇಶ್ಯಾವಾಟಿಕೆಗಳ ಹಾದರದ ಕೂಸು.

ಈ ಎಲ್ಲ 'ಮಾಂಸ ಮಾರಾಟ' ಕೇಂದ್ರಗಳಿಗೆ ಮೇಲ್ನೋಟಕ್ಕೆ ಒಬ್ಬ ಮಾಲೀಕ ಕಂಡು ಬಂದರೂ ಅವುಗಳ ನಿಜವಾದ ಮಾಲೀಕ ಎಲ್ಲೋ ಮಹಿಳಾ ಕಲ್ಯಾಣದ ಬಗ್ಗೆ ಭಾಷಣ ಬಿಗಿಯುತ್ತಿರುವ ರಾಜಕಾರಣಿಯಾಗಿರಬಹುದು. ಇನ್ನೆಲ್ಲೋ ಅನಾಥಾಶ್ರಮಕ್ಕೆ ಅಡಿಗಲ್ಲಿಡುತ್ತಿರುವ ಸಮಾಜಸೇವಕನಿರಬಹುದು. ಎಲ್ಲವೂ ನಿಗೂಢ. ಮುಂಬೈ ವ್ಯವಹಾರದ ನಿಜವಾದ ರಹಸ್ಯವೇ ಈ ನಿಗೂಢತೆಯಲ್ಲವೇ?

1920ರಿಂದ 1930ರ ವರೆಗಿನ ಅವಧಿಯಲ್ಲಿ ಇಲ್ಲಿ ಈಗಿನ ರೀತಿಯ ಸಂಘಟಿತ ಹಿಂಸಾಚಾರಗಳಿರಲಿಲ್ಲ. ಆಗ ಅಫ್ಘಾನಿಸ್ತಾನದಿಂದ ಬಂದ ಪಠಾಣರು ಇಲ್ಲವೇ ಮಧ್ಯಮುಂಬಯಿಯಲ್ಲಿ ದಾಂಧಲೆ ನಡೆಸುತ್ತಿದ್ದ 'ರಾಂಪುರಿ ದಾದಾ'ಗಳಷ್ಟೇ ಆಗಾಗ ಕಳ್ಳತನ, ದರೋಡೆ ನಡೆಸಿ ಸುದ್ದಿ ಮಾಡುತ್ತಿದ್ದರು. ಆಗ ಮಧ್ಯಮುಂಬಯಿಯ ಪ್ರತಿಯೊಂದು ಗಲ್ಲಿ ಕೂಡಾ ಒಬ್ಬ ದಾದನ ಹೆಸರಲ್ಲಿತ್ತು.

1947ರ ನಂತರ ಈ ಸ್ಥಿತಿ ಪೂರ್ಣ ಬದಲಾವಣೆಗೊಂಡಿತು. ಆಗಲೇ ಸೃಷ್ಟಿಗೊಂಡದ್ದು ಭೂಗತ ಜಗತ್ತು. ಚಿನ್ನದ ಬಿಸ್ಕತ್ ತುಂಬಿದ ಹಡಗುಗಳು ಮುಂಬಯಿಗೆ ಬರಲಾರಂಭಿಸಿದವು. ಸಮುದ್ರದಲ್ಲಿನ ಭಾರತದ ಗಡಿ ಪ್ರದೇಶದ ವರೆಗೆ ಬರುತ್ತಿದ್ದ ಈ ಹಡಗುಗಳಿಂದ 'ಮಾಲು' ಸಂಗ್ರಹಿಸಿ ನಗರದ ಸುರಕ್ಷಿತ ತಾಣಗಳಿಗೆ ಒಂದು ತಂಡ ತಲುಪಿಸಿದರೆ, ಮತ್ತೊಂದು ತಂಡ ಅದನ್ನು ನಗರದ ಚಿನ್ನದ ವ್ಯಾಪಾರಿಗಳಿಗೆ ತಲುಪಿಸುತ್ತದೆ.

1950ರಲ್ಲಿ ಜಾರಿಗೊಳಿಸಲಾದ ಮದ್ಯಪಾನ ನಿಷೇಧ ಭೂಗತ ಜಗತ್ತನ್ನು ಮತ್ತಷ್ಟು ವಿಸ್ತರಿಸಿತು. ಕಳ್ಳಭಟ್ಟಿ 'ಅಡ್ಡೆ'ಗಳು 'ಕೆಂಪು ದೀಪ'ದ ಪ್ರದೇಶಗಳಲ್ಲಿ ವ್ಯಾಪಕವಾಗಿ ಸ್ಥಾಪಿಸಲ್ಪಟ್ಟವು.

1970ರ ದಶಕದಲ್ಲಿ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಚಿನ್ನದ ಬೆಲೆ ಹಠಾತ್ತನೆ ಏರಿದಾಗ ಚಿನ್ನಕಳ್ಳ ಸಾಗಾಣಿಕೆ ಕುಸಿಯಿತು. ಇದೇ ಸಮಯದಲ್ಲಿ ಮಸ್ತಾನ್ ಪಟೇಲ್, ಬಖಿಯಾರು ಜೈಲು ಸೇರಿದರು.

ಮಾದಕದ್ರವ್ಯಗಳ ಕಳ್ಳಸಾಗಾಣಿಕೆಗೆ ಭಾರತ ಮಧ್ಯವರ್ತಿ ದೇಶವಾಗುವ ಮೂಲಕ 80ರ ದಶಕದಲ್ಲಿ ಮತ್ತೆ ಕಳ್ಳಸಾಗಣಿಕೆ ಚುರುಕಾಯಿತು. ಭಾರತ ಪಾಕಿಸ್ತಾನ ಗಡಿ ಮೂಲಕ ಮುಂಬಯಿ ತಲುಪುತ್ತಿದ್ದ ಮಾದಕದ್ರವ್ಯಗಳು ಅಲ್ಲಿಂದ ವಿದೇಶಕ್ಕೆ ರವಾನೆಯಾಗುತ್ತಿದ್ದವು. ಚಿನ್ನ ತರುತ್ತಿದ್ದ ಹಡಗುಗಳು ಮಾದಕ ದ್ರವ್ಯ ತುಂಬಿಕೊಂಡು ಹಿಂದಿರುಗುತ್ತವೆ.

80ರ ಮಧ್ಯ ಭಾಗದಲ್ಲಿ ಚಿನ್ನ ಮತ್ತು ಬೆಳ್ಳಿಗಳೆರಡು ಭಾರತಕ್ಕೆ ಬರಲಾರಂಭಿಸಿತು. ಮುಂಬಯಿ ಕರಾವಳಿಯಲ್ಲಿ ಕಾವಲು ಇತ್ತೀಚೆಗೆ ಬಿಗಿಗೊಂಡ ನಂತರ ಕಳ್ಳಸಾಗಾಣಿಕೆಯನ್ನು ಗುಜರಾತ್ ಕರಾವಳಿಗೆ ವರ್ಗಾಯಿಸಲಾಗಿದೆ. ಜತೆಯಲ್ಲಿ ದಕ್ಷಿಣ ಕನ್ನಡದ ಕರಾವಳಿ ಕೂಡಾ 'ಕಳ್ಳ ಸಾಗಾಣಿಕೆಗಾರರ ಸ್ವರ್ಗ' ಆಗಿದೆ. ಇತ್ತೀಚೆಗೆ ಗಂಗೊಳ್ಳಿ ಮತ್ತು ಹೆಜಮಾಡಿಗಳಲ್ಲಿ ಕಸ್ಟಮ್ಸ್ ಇಲಾಖೆ ಹಿಡಿದ ಚಿನ್ನ ದಾವೂದ್‌ಗೆ ಸಂಬಂಧಿಸಿದ್ದೆಂಬ ರಹಸ್ಯ ನಿಧಾನವಾಗಿ ಬಯಲಾಗುತ್ತಿದೆ.

ಸಮುದ್ರ ಮಾರ್ಗದಲ್ಲಿ ಅಪಾಯ ಹೆಚ್ಚಾದಂತೆ ಕಳ್ಳಸಾಗಾಣಿಕೆಗಾರರು ಈಗ ವಿಮಾನಮಾರ್ಗಕ್ಕೆ ಮೊರೆ ಹೋಗಿದ್ದಾರೆ. ವಿಮಾನದ ಮೂಲಕ ನಿತ್ಯ ಹಾ

(ಮೂರನೆ ಪುಟಕ್ಕೆ)

ಕಚಗುಳಿ

ವೋಟಿಗೆ ಫಾರ್ ಅರೆ ನಗ್ನತೆ!

ರಾಜೀವ್ ಗಾಂಧಿ ಮನೆಗೆ ಬಂದು 'ಉಫ್' ಅಂತ ಸೋಫಾದ ಮೇಲೆ ಬಿದ್ದುಕೊಂಡರು. ಸೋನಿಯಾ ಬಂದು ಬುಲೆಟ್‌ಪ್ರೂಫ್ ಕೋಟಿನ ಗುಂಡಿ ತೆಗೆಯಲಾರಂಭಿಸಿದರು. ರಾಜೀವ್ ಅತ್ತ ಇತ್ತ ನೋಡಿ, "ರಾಹುಲ್ ಎಲ್ಲಿ?" ಕೇಳಿದರು. ಸೋನಿಯಾ "ರಾಹೂ..." ರಾಗ ಎಳೆದು, "ನೋಡು ಡ್ಯಾಡಿ ಬಂದಿದ್ದಾರೆ..." ಕೂಗಿದರು. ರಾಹುಲ್‌ಮರಿಯ ಪ್ರತಿಕ್ರಿಯೆ ಇಲ್ಲ. ರಾಜೀವ್ ಸ್ವತಃ ಕೂಗಿದರು. ರಾಹುಲ್‌ನ ದಂ ಇಲ್ಲ. ಇಬ್ಬರಿಗೂ ಅಚ್ಚರಿ. ನೇರ ಹುಡುಗನ ಕೋಣೆ ಕಡೆ ಹೆಜ್ಜೆ ಇಟ್ಟರು. ಅಲ್ಲಿ ನೋಡಿದರೆ ಹುಡುಗ 'ಆರ್ಚಿ' ಕಾಮಿಕ್ಸ್ ಹಿಡಿದುಕೊಂಡು ಕೂತಿದ್ದ. "ಏನು? ಕೇಳಿಸಲ್ವೇನೊ?" ಸೋನಿಯಾ ಕೊಂಚ ಜೋರಾಗಿಯೇ ಕೇಳಿದಳು.

"ಕೇಳಿಸ್ತು" ಮಗನಿಂದ ಉತ್ತರ. ಅದೂ ಕಾಮಿಕ್ಸ್‌ನಿಂದ ಮುಖ ಎತ್ತದೆ.

ಯಾವತ್ತೂ ಮೈಮೇಲೆ ಬಿದ್ದು ಮಾತನಾಡುವ ಹುಡುಗನಿಗೆ ಇವತ್ತು ಏನಾಯಿತಪ್ಪ ಅಂತ ರಾಜೀವ್‌ಗೆ ಸೋಜಿಗ. ಮಗನ ಹತ್ತಿರ ಹೋಗಿ ವಿಚಾರಿಸಿದರು. ರಾಹುಲ್ ಒಂದೇ ಸವನೆ ಪಟಪಟನೆ ಮಾತನಾಡಲಾರಂಭಿಸಿದ.

"ಡ್ಯಾಡ್ ! ನಿಮಗೆ ತಲೆಸರಿಯಿಲ್ಲ ! ಮತದಾನದ ವಯಸ್ಸನ್ನು 21ರಿಂದ 18ಕ್ಕೆ ಇಳಿಸಿದ್ದಕ್ಕೆ ನನ್ನ ವಿರೋಧವಿದೆ ! " ರಾಜೀವ್‌ಗಾಂಧಿಗೆ ನಂಬಲು ಸಾಧ್ಯವಾಗಲಿಲ್ಲ. ಯಾಕೆಂದರೆ ರಾಹುಲ್ ಈ ವರೆಗೆ ರಾಜಕೀಯದ ಬಗ್ಗೆ ಸೊಲ್ಲೆತ್ತಿರಲಿಲ್ಲ. ಈಗ ಇದ್ದಕ್ಕಿದ್ದಂತೆ ಥೇಟ್ ವಿಪಕ್ಷದವನಂತೆ ಅರಚುತ್ತಿದ್ದಾನಲ್ಲ ಎಂದು ಅಪ್ಪನಿಗೆ ಆಶ್ಚರ್ಯವೋ ಆಶ್ಚರ್ಯ. ಜೊತೆಗೆ ಪುತ್ರನಲ್ಲೂ ರಾಜಕೀಯ ರಕ್ತ ಗ್ರೂಪ್ ಇದೆಯಲ್ಲ ಎಂಬ ಹೆಗ್ಗಳಿಕೆ ಬೇರೆ !

"ಅಲ್ಲ ಮಾರಾಯ... ಲೋಕಸಭೆಯಲ್ಲಿ ಅದನ್ನು ವಿರೋಧ ಪಕ್ಷದವರೆಲ್ಲ ಒಕ್ಕೊರಲಿನಿಂದ ಸ್ವಾಗತಿಸಿರುವಾಗ"... ಎಂದು ರಾಜೀವ್‌ಗಾಂಧಿ ಹೇಳುತ್ತಿದ್ದಂತೆ ಮಗ ರಾಹುಲ್ ಮತ್ತೆ ಗುಡುಗಲಾರಂಭಿಸಿದ.

"ಹಾಂ ! ನೋಡು, ಅಲ್ಲೇ ಇರುವುದು !... ಇಲ್ಲ, ಡ್ಯಾಡ್ ! ನಿನಗೇನೂ ಗೊತ್ತಾಗೊಲ್ಲ."

"ಅರೆರೆ ! ನನಗೇನೂ ಗೊತ್ತಾಗೊಲ್ವಾ ! ! " ಎಂದು ರಾಜೀವ್‌ಗೆ ಮತ್ತಷ್ಟು ಬೆರಗಾಯಿತು.

"ಡ್ಯಾಡ್ ! ನಾನು ಹೇಳುತ್ತಿದ್ದೇನಂತ ತಮಾಷೆಯಾಗಿ ತೆಗೆದುಕೊಳ್ಳಬೇಡ. ವಿರೋಧ ಪಕ್ಷದವರು ಮತದಾನದ ವಯಸ್ಸನ್ನು ಇಳಿಸಿದ್ದನ್ನು ಸ್ವಾಗತಿಸಿದ್ದಾದರೂ ಯಾಕೆ ಅಂತ ಯೋಚನೆ ಮಾಡಿದ್ದಿಯಾ ? "

"ಇಲ್ಲಲ್ಲ... ಯಾಕೆ ಹೇಳು ? " ಅಪ್ಪ ನಗುತ್ತಾ ಕೇಳಿದ.

"ಮತದಾನದ ವಯಸ್ಸು 21 ರಿಂದ 18 ಕ್ಕೆ ಇಳಿಸಿದರಿಂದ ನಿಮ್ಮ ಪಕ್ಷಕ್ಕೆ ಹಾನಿಯಿದೆ... ಅದಕ್ಕೆ ! " ರಾಹುಲ್ ಪಕ್ಕಾ ರಾಜಕಾರಣಿಯಂತೆ ಮಾತನಾಡುತ್ತಿದ್ದ.

"ಓ ಇಂಟರೆಸ್ಟಿಂಗ್ ! ... ನಮ್ಮ ಪಕ್ಷದ ಯಾವ ನರಪಿಳ್ಳೆಯೂ ಕನಸ್ಸಿನಲ್ಲೂ ಯೋಚಿಸದ ವಿಚಾರ ನೀನು ಯೋಚಿಸಿದಿಯಲ್ಲ ! ಆದರೆ ಮರಿ, ಅದು ಹೇಗೆ ಹಾನಿಯಾಗುತ್ತೆ, ಅಂತ ಸ್ವಲ್ಪ ಬಿಡಿಸಿ ಹೇಳುತ್ತೀಯಾ ? " ರಾಜೀವ್ ಗುರುವಿನ ಮುಂದೆ ಕುಳಿತಿರುವ ಶಿಷ್ಯನಂತೆ ಪ್ರಶ್ನಿಸಿದ.

"ಡ್ಯಾಡ್, ನೀನು ನನ್ನ ಮಾತನ್ನು ಸೀರಿಯಸ್ಸಾಗಿ ತೆಗೆದುಕೊಳ್ಳುವುದಿದ್ದರೆ ಮಾತ್ರ ಹೇಳುತ್ತೇನೆ. ಮಗನ ಸೀರಿಯಸ್‌ನೆಸ್‌ಗೆ ಅಪ್ಪ ಸೀರಿಯಸ್ಸ್ ಆದ.

"ನಿಮ್ಮ ಪಕ್ಷಕ್ಕೆ 20 ರಿಂದ 18 ವರ್ಷದ ಯುವಕರು ಖಂಡಿತ ಓಟು ಹಾಕೊಲ್ಲ. ಈಗ ಹೇಳು ಕಾಂಗ್ರೆಗೆ ಇದರಿಂದ ಲಾಭನೋ ನಷ್ಟನೋ ? "

"ಮೈ ಬಾಯ್, ಅವರೆಲ್ಲ ನಮಗೆ ಯಾಕೆ ಓಟು ಹಾಕೊಲ್ಲ ಅಂತ ಹೇಳು ಮಾರಾಯ ! " ರಾಜೀವ್ ಕುತೂಹಲದಂಚಿನಲ್ಲಿದ್ದರು.

"ಅವರೆಲ್ಲ ಓಟು ಹಾಕದೇ ಇರುವುದಕ್ಕೆ ನೀನೇ ಕಾರಣ. " ಮಗನ ಮಾತು ಕೇಳಿ ರಾಜೀವರ ಹುಬ್ಬು ಮೇಲೆ ಹಾರಿತು.

"ಹಾಂ, ಆಶ್ಚರ್ಯವಾಗುತ್ತಾ ? ಎಂದು ಹೇಳುತ್ತಾ ರಾಹುಲ್ ಅಲ್ಲೇ ಪಕ್ಕದಲ್ಲಿದ್ದ ದಿನಪತ್ರಿಕೆಯೊಂದನ್ನು ಅಪ್ಪನ ಮುಖದ ಎದುರಿಟ್ಟ.

"ನೋಡು, ಈ ಸುದ್ದಿಯಿಂದ ಯುವಕರ ಮೇಲೆ ಎಷ್ಟು ಪರಿಣಾಮ ಆಗುತ್ತದೆ ಗೊತ್ತಾ ? ಎಂದು ಹೇಳಿದ. ರಾಜೀವ್‌ಗಾಂಧಿಗೆ ತಾನು ಪೀತಾಂಪುರದಲ್ಲಿ ಹೊಸ ಟಿ. ವಿ. ಟ್ರಾನ್ಸ್‌ಮಿಟರ್‌ನ್ನು ಉದ್ಘಾಟಿಸಿ ಮಾತನಾಡಿದ್ದು ನೆನಪಾಯಿತು. ಮಗ ಕೇಳಿದ, ಈಗ ಟಿ. ವಿ. ನೋಡಿದಿಯಾ ? "

"ಇಲ್ಲಲ್ಲ... ಯಾಕೆ ? ಈಗ ನನ್ನನ್ನು ತೋರಿಸ್ತಾ ಇಲ್ವಾ ? "

"ನಿನ್ನನ್ನು ತೋರಿಸುವುದು ಅವರು ನಿಲ್ಲಿಸೊಲ್ಲ ಬಿಡು... ಆದರೆ 'ಶ್ರೈನಿಂಗ್ ಗ್ಲೋರಿ'ಯ ಡಿಂಪಲ್ ಕಪಾಡಿಯಾ, ರಿರಿಲ್ ಹುಡುಗಿಯವರನ್ನೆಲ್ಲಾ 'ತೋರಿಸೋದು' ನಿಲ್ಲಿಸಿ ಬಿಟ್ಟಿದ್ದಾರೆ ! " ಮಗ ಹುಬ್ಬು ಗಂಟಿಕ್ಕಿ ಹೇಳಿದ.

ಓಹ್ ! ಸಾಬೂನು ಹುಡುಗಿಯರನ್ನು ನೀನು ಹೇಳುತ್ತಿರೋದು ! ಪರವಾ ಇಲ್ಲ... ನೀನೊಳ್ಳೆ ಫೋಲಿಯಾಗ್ಬಿಟ್ಟಿದ್ದಿಯ ! " ರಾಜೀವ್ ಸೋನಿಯಾ ಮುಖ ನೋಡಿ ನಕ್ಕರು

"ನಾನು ಮಾತ್ರ ಅಲ್ಲ... ನಮ್ಮ ದೇಶದಲ್ಲಿ 20ರಿಂದ 18ರ ವಯಸ್ಸಿನ ಯುವಕರೆಲ್ಲ ಅತ್ಯಂತ ಫೋಲಿಗಳು" ರಾಹುಲ್ ಗಾಂಭೀರ್ಯ ತುಂಬಿದ ಧ್ವನಿಯಲ್ಲಿ ಹೇಳಿದ.

ರಾಜೀವ್ ಗಾಂಧಿ ಮಗನ ಮಾತು ಕೇಳಿ ಇದ್ದಕ್ಕಿದ್ದಂತೆ ತಡವರಿಸ ತೊಡಗಿದರು. ಅವರು ಫೋನ್ ಕಡೆ ಓಡಿದರು. ವಾರ್ತಾ ಸಚಿವ ಭಗತ್‌ರಿಗೆ ಬುಲಾವ್ ಹೋಯಿತು. ಅದೂ ಆ ಅಪರಾತ್ರಿಯ ಹೊತ್ತು !

ರಾಜೀವ್ ಮನೆಯಲ್ಲಿ ಭಗತ್ ಪ್ರತ್ಯಕ್ಷರಾದರು. ಅವರು ನೈಟ್‌ಡ್ರೆಸ್‌ನಲ್ಲೇ ಇದ್ದರು. ಕಣ್ಣಲ್ಲಿ ನಿದ್ದೆ ಬಿಟ್ಟಂತಿರಲಿಲ್ಲ. ರಾಜೀವ್ ಗಾಬರಿ ಧ್ವನಿಯಲ್ಲಿ ಹೇಳಿದರು.

"ಭಗತ್, ಈಗ ಒಂದು ಅನಾಹುತ ಆಗುವುದನ್ನು ತಪ್ಪಿಸಬೇಕು. ನಾಳೆಯಿಂದ ದೂರದರ್ಶನದಲ್ಲಿ ಹೆಚ್ಚೆಚ್ಚು ಅರೆನಗ್ನ ಮಹಿಳೆಯರ ಜಾಹೀರಾತುಗಳನ್ನು ಪ್ರದರ್ಶಿಸಬೇಕೆಂತ ಹೇಳಿ."

ಭಗತ್‌ರ ನಿದ್ದೆ ಮಂಪರು ಎಲ್ಲಿ ಓಡಿ ಹೋಯಿತೋ ! "ಏನು ಸಾರ್ ! ! ಕೆಲವು ದಿನಗಳ ಹಿಂದೆ ಅರೆನಗ್ನ ಮಹಿಳೆಯರನ್ನು ದೂರದರ್ಶನ ಜಾಹೀರಾತುಗಳಲ್ಲಿ ತೋರಿಸುವುದನ್ನು ಸಹಿಸುವುದಿಲ್ಲಾಂತ ನೀವೇ ಹೇಳಿದ್ದೀರಲ್ಲ ... "

"ಹೌದು ಭಗತ್, ನಾವು ಮತದಾನದ ವಯಸ್ಸನ್ನು 18 ರ ವರೆಗೆ ಇಳಿಸಿದ್ದರಿಂದ ನಾನು ಇನ್ನು ಅದನ್ನು ಸಹಿಸಬೇಕಾಗುತ್ತೆ ! "

"ಜನಾವಣೆ ಸುಧಾರಣೆಗಾಗಿ ಸುಧಾರಣೆ ! "

ಭಗತ್ ಮೆಲ್ಲನೆ ಉಸುರಿದರು.

— ಪಕ್ರು

...ತ್ತು ಮುಗಿಸುವುದು ಸಂದಿಗ್ಧವೇ. ಹೇಗೆ ಬಂದರೂ ಒಂದು ಸುತ್ತು ಆ ತೋಟದ ಕೆರೆಯಿಂದ ಪ್ರಾರಂಭಿಸಿ ಆಕೆಯ ವರೆಗೆ ಬೆಳೆಸಲೇ? ಅಥವಾ ಊರು, ಕೆರೆ, ದೇವರು ಹಾಗೂ ಹುಟ್ಟಿಸಿದ ಅಪ್ಪ ಅಮ್ಮ ಅಂದು ಬಾಂಧವರು...ಇತ್ಯಾದಿ ಯಾವರು ಆಕೆಯಲ್ಲಿ ಹುಟ್ಟಿಸಿದ ಆಸೆ, ಆಕಾಂಕ್ಷೆ ಕನಸುಗಳು, ನಂಬಿಕೆಗಳು...ಇತ್ಯಾದಿಗಳಿಂದ ಆಕೆಯ ವರೆಗೆ ಅಂತ ಮುಗಿಸಲೇ?

ಏನಿದ್ದರೂ ಊರಿನ ಬದುಕಿನ ಸಂಚಿಯೊಳಗೆ ಆಕೆ. ಊರನ್ನು ಬಿಟ್ಟು ಮನುಷ್ಯ ಇಲ್ಲ. ಮನುಷ್ಯನನ್ನು ಬಿಟ್ಟು ಕಥೆ ಇಲ್ಲ. ಮನುಷ್ಯರು ಎಗ್ಗು ಸಿಗ್ಗು ಎಲ್ಲವನ್ನು ಅನುಭವಿಸುವುದು ಒಂಟಿಯಾಗಿಯೇ ಆದರೂ ಅವು ಹುಟ್ಟಿಕೊಳ್ಳುವುದು ಸಮೂಹಕ್ಕೆ ಬದ್ಧವಾಗಿ, ಊರಿಗೆ ಅಂಟಿಕೊಂಡು.

ಇನ್ನೂ ಒಂದು ಕೊರತೆ, ಕೆರೆಯ ಬಗ್ಗೆ ವಿವರಣೆ ದೊರೆತದ್ದೂ ಸಾಲದು. ನನ್ನ ಬಾಲ್ಯದಲ್ಲಿ ಕಂಡ ಕೆರೆಗಳಷ್ಟೋ ಇದ್ದಿರಬಹುದು. ಆದರೆ ಇಲ್ಲಿರುವ ಕೆರೆ ಗಮ್ಯವಾಗುವುದು ಆಕೆಗೆ ಸಂಬಂಧಿಸಿದುದು ಎನ್ನುವುದನ್ನು ಗಮನಿಸಿ. ಆಕೆಯ ಮನಸ್ಸಿನ ಸಾದೃಶ್ಯದ ಸ್ಥಾನದಲ್ಲಿ ನನ್ನ ಮನಸ್ಸು ಇದೆ ಎಂದು ಹೇಳಿಕೊಳ್ಳುವ ಧೈರ್ಯವೂ ಇಲ್ಲ. ಆ ಕೆರೆಯ ಆಕಾರದ, ಅರ್ಥದ ಎಲ್ಲ ವಿವರಗಳು ಅವಳಿಗೆ ಆಳವಾಗಿ ತಿಳಿದಷ್ಟು,ಆಕೆಯ ಕಣ್ಣಿನ ಪಾರದರ್ಶಕ ಗೊಂಬೆಯನ್ನು ಹಾದು,ಆಕೆಯ ಎದೆಯಲ್ಲಿ ಜೋಡು ಒನಕೆಗಳು ಗುದ್ದಾಡಿದ ಹತ್ತು ಹಲವು ಸ್ಥಿತಿಗಳಲ್ಲಿ ಆಕೆಯ ತಿಳಿವಿಗೆ ಬಂದಷ್ಟು ನನಗೆ ಬಂದಿಲ್ಲ. ಆದರೆ ಆಕೆಯ ಬಗ್ಗೆ ಹೇಳುವ ಒತ್ತಾಸೆಯಲ್ಲಿ ಕೆರೆಯನ್ನು ಮರೆಯುವುದು ಸಾಧ್ಯವಿಲ್ಲ.

ಕೆರೆ

೧

ಊರ ಕಾಯುವ ಅಪ್ಪ ಅಮ್ಮನೆಂದರೆ ಆ ದೇವರುಗಳು. ಆ ದೇವಾಲಯಗಳು ಇರುವ ಸ್ಥಳ ಊರ ಹೊರಗೆ ಎಂದರೆ ಹತ್ತಿಪ್ಪತ್ತು ಮನೆಗಳ ಗುಂಪಿನಿಂದ ದೂರ. ಆ ದೇವಾಲಯಗಳ ನಡುವೆ ಒಂದಿಷ್ಟು ಹಾಡಿ, ಸಣ್ಣ ಕಾಡು. ಸಾಧಾರಣ ಒಂದು ಫರ್ಲಾಂಗು ದೂರಕ್ಕೆ ಹರಡಿಕೊಂಡಿದೆ. ಅವುಗಳ ಎದುರುಗಡೆ ಒಂದಿಷ್ಟು ಬಯಲು. ಅದರಾಚೆ ಫಳಕ ಬಳುಕ ಹರಿಯುವ ಹೊಳೆ. ಎರಡೂ ದೇವಾಲಯಗಳ ಎದುರಿನ ಬಯಲಿನ ಮಧ್ಯಭಾಗದಲ್ಲಿ ಒಂದು ಸಣ್ಣ ಬಸ.ಅಲ್ಲಿರುವುದು ಒಂದು ಕೆರೆ.ದೂಪ ಕಾಲದ್ದೋ ಏನೋ.ಸುತ್ತಲೂ ಮುಳ್ಳು ಗಿಡಗಂಟಿ. ಬಳ್ಳಿಗಳು.ಪಾತಾಳ ಬಿರುಕೈ ಕೊಂಡೊಯ್ಯುವಂತೆ ತೋರುತ್ತಿರುವ ತೀರ ಅಗಲ ಕಿರಿದಾದ ದಾರಿಯ ಕೆರೆಯನ್ನು ಮುಟ್ಟುವಂತಿತ್ತು.

"ಅಲ್ಲ ಹೆಣ್ಣೆ, ಹಾಂಗಂತ್ಹೇಳಿ ಈ ಮರ್‍ಲ್ ಕೆಲ್ಸ ಮಾಡೂದಾ? ರಾಘವೇಂದ್ರ ಸ್ವಾಮಿಯವ್ರು ಗುರುವಾರ ಒಪ್ಪತ್ ಹಿಡ್ಸ್ ಮುದಿ ಆಯ್ದು ಏನಾತ್? ಆನೀ ಅತ್. ಎಷ್ಟ್ ಹೇಣ್ ಮಕ್ಕಿಗೆ ಆಯತ್ ನಿಂಗಾತಿಲ್ಲೆ ಅಂದ್ರೆ ಏನ್...?"

ಎಂದರೆ ಗದ್ದೆಗಳು..ನೂರರ ಗಟ್ಟಳೆ ಎಕ್ರೆಯ ಆ ಜಾಗವನ್ನು ದಾಟಿದರೆ ತೆಂಗಿನ ಮರಗಳ ನಡುವೆ ಅಡಗಿರುವ ಮಂಗಳೂರು ಹೆಂಚಿನ ಅಥವಾ ಮುಳಿ ಹುಲ್ಲಿನ ಸಣ್ಣ-ದೊಡ್ಡ ಮನೆಗಳು ಕಾಣಿಸುತ್ತವೆ.

ಇನ್ನು ಊರ ಕಾಯುವ ಅಪ್ಪ ಅಮ್ಮನಂತಿರುವ ಆ ದೇವರುಗಳಲ್ಲಿ ಒಬ್ಬಳು 'ಅಮ್ಮನವರು' ಆದರೆ ಇನ್ನೊಬ್ಬ ಕೊಕ್ಕೇಶ್ವರ. ಒಂದೂವರೆ ಅಳೆತ್ತರದ ಆ ಬೊಂಬೆ ಭಯ ರೂಪದ್ದೇ ಆಗಿತ್ತು. ಗುಮ್ಮನ ಬೆದರಿಕೆಯಲ್ಲಿ ಬೆಳೆದ ನಾಲ್ಕೈದು ವರ್ಷದ ಮಗುವೊಂದನ್ನು ಅಲ್ಲಿ ಬಿಟ್ಟರೆ ಅದಕ್ಕೆ ಅಪಸ್ಮಾರ ಬಡಿಯುವುದು ಊರಿನವರ ಕಷ್ಟ ಸುಖಕ್ಕೆ ಅಮ್ಮ ಅಪ್ಪನಂತಿರುವ ಆ ದೇವರುಗಳನ್ನು ಪೂಜಿಸಿಕೊಳ್ಳಲಿ ಅಂತ ಹೇಳಬಹುದಿತ್ತು. ಆದರೆ ಇಲ್ಲಿ ಅಷ್ಟು ಹೇಳಲಿಕ್ಕೂ ಸಾಧ್ಯವಿಲ್ಲ. ಏಕೆಂದರೆ ದೇಗೆ ತುಂಬಿದ, ಯಾವುದೇ ರೀತಿಯಲ್ಲಿ ಸಮಾಧಾನ

ಯಶೋಧಾ

ಗೊಳಿಸಿಕೊಳ್ಳಲು ಅವಕಾಶವಿರದ ಸ್ಥಿತಿಯಲ್ಲಿ ಮನಸ್ಸಿನ ಉದ್ವಿಗ್ನತೆಯನ್ನು ಮುಖದಲ್ಲಿ ಹಿಡಿಸಿಕೊಳ್ಳುತ್ತಿದ್ದರೆ 'ಉರಿ ಮುಖದವಳು' 'ಬೆಳ್ಳಕ್ಕಿ ಬಸಿಯ' ಎಂದು ಊರ ಜನ ಹಳಿಯುತ್ತಾರೆ. ಆದೇ ಜನ ಆ ಉರಿ ಮುಖದ ವಿಗ್ರಹಕ್ಕೆ ಕಣ್ಣುಮುಚ್ಚಿ ಅಡ್ಡ ಬೀಳುವಾಗ ಮನಸ್ಸಿನಲ್ಲಿ ಆ ವಿಗ್ರಹವನ್ನು ಹೇಗೆ ತುಂಬಿಕೊಳ್ಳುತ್ತಾರೋ ಹೇಗೆ 'ಅಮ್ಮ, ಕಾಯುವವಳು, ಕೊಂಬುವವಳು ಎಲ್ಲ ನೀನೇ' ಎಂದು ಅನುಗ್ರಹವನ್ನು ಕೇಳುತ್ತಾರೋ! ಹಾಗೆ ನೋಡಿದರೆ ಜನರ ಯಾವುದೇ ನಡವಳಿಕೆಗೂ ಅರ್ಥವನ್ನು ಹುಟ್ಟಿಸುವುದು ಸುಲಭವಲ್ಲ ಎನ್ನೋಣ.

ಇಲ್ಲಿಯ ಹಿರಿಯ ಹೆಂಗಳೆಯರೇ ಹೇಳುತ್ತಾರೆ, "ಇಲ್ಲಿ ಹೆಣ್ಣುಗಳು ಸುಖದಿಂದಬಾಳಿದ್ದು ದೂರಕ್ಕೊಂದು, ಅಂತಹ ಪುಣ್ಯಾತ್ಮೆಯೇ ಆಗಿರಬೇಕು. ತಾಯಿಯ ಮನೆಯಲ್ಲಿ ಕಿರಿದರದಲ್ಲಿ ಪಂಕ್ತಿಯಲ್ಲಿ ಕುಳಿತರೂ ಹಾಲು ತುಪ್ಪ ಗೊಟೀ. ಯಾಕೆಂದರೆ ಹುಡುಗಿ ಬೇಗನೆ ಮೈ ನೆರೆಯಬಹುದು ಎಂದು. ಇನ್ನು ಮದುವೆಯಾದ ನಂತರ "ಬಂದ ಹೆಣ್ಣು" ಉದ್ದೇಶ ಪೂರ್ವಕವಾಗಿಯೇ

ಕೊಂಡವಳ ನಾಲಗೆ ಜೇನನ್ನು ಸವಿಯಲೇ ಇಲ್ಲ. ಇಂಥವರು ಸ್ವರ್ಗ ಸುಖವನ್ನು ಕಾಣದೆ ಬವಣೆಯಲ್ಲಿಯೇ ಬೆಂದವರು. ಇನ್ನು ಅಂಥ ಕ್ಷಣ ಎಲ್ಲಿಯಾದರೂ ದೊರೆತಿದ್ದರೆ ಇಲ್ಲಿ—ಗದ್ದೆಯ ಕೆಲಸಕ್ಕೆ ಹೋದಾಗ, ಯಾವುದೋ ಮರದ ನೆರಳಲ್ಲೋ ಅಥವಾ ಮನೆಯಲ್ಲಿಯೇ ಮಧ್ಯಾಹ್ನದ ಊಟದ ನಂತರ ಎಂದರೆ ಒಂದು ಪಾಳಿಯ ಕೆಲಸದ ನಂತರದ ಹೊತ್ತಿನಲ್ಲಿ ಒಂದು ಗಳಿಗೆ ಬಿಡುವು ಸಿಕ್ಕಿದಾಗ, ಹುಲ್ಲು ಕುಪ್ಪರೆಯ ಅಡ್ಡದಲ್ಲೋ, ಅಟ್ಟಿನ ಕೊಟ್ಟಿಗೆಯಲ್ಲೋ ಅಂತೂ ಬೇರೆಯವರ ಕಣ್ಣಿಗೆ ಮರೆಯಾದ ಅಂಥ ಸನ್ನಿವೇಶದಲ್ಲಿ ಹೊಟ್ಟೆಯಲ್ಲಿ ಹುಟ್ಟಿದ ಕೂಸು ಹತ್ತಿರದಲ್ಲಿದ್ದರೆ ಅದನ್ನು ಮುದ್ದಾಡಿದಾಗ ಅಂಥ ಸುಖವನ್ನು ಕಾಣುತ್ತಿದ್ದುದು ಉಂಟು. ಆ ಮಗು ಎದೆಗೆ ಒರಗಿದಾಗ, ಮೊಲೆಯುಣ್ಣುತ್ತಾ ಕೈಕಾಲುಗಳನ್ನು ಆಡುತ್ತಿದ್ದಾಗ ಮನದ ಕುದಿ ಒಂದು ಗಳಿಗೆ ತಣಿಯುತ್ತಿದ್ದುದು ಇದೆ. (ಅದೂ ಗುಟ್ಟಾಗಿ ಮುದ್ದಾಡಿದರೆ ಸರಿ, ಇಲ್ಲದಿದ್ದರೆ ಇದರಲ್ಲೇ ಹೊಟ್ಟೆ ತುಂಬಿಸಿಕೊಂಡಿದ್ದಾಳಲ್ಲ ಎಂದು ಊಟವನ್ನೂ ಹಾಕಲಿಕ್ಕಿಲ್ಲ ಎಂದು ಈಗ ನೆನಪಿನ ವ್ಯಂಗ್ಯದ ಸುಳಿಯನ್ನು ಬಿಚ್ಚುವವರು ಇದ್ದಾರೆ) ಇನ್ನು ಬೇರೆ ಸ್ವರ್ಗವೆಂದರೆ ಯಕ್ಷಗಾನದಲ್ಲಿ ವಿವರಣೆಗೊಂಡು ಮನಸ್ಸಿನಲ್ಲಿ ಕುಣಿಯುವ ಯಕ್ಷಗಾನದ ಸ್ವರ್ಗವೇ ಸರಿ. ಒಟ್ಟಿನಲ್ಲಿ ಈ ಕ್ರಿಯೆ ರಾಶಿಕತೆಗಳೂ ಹಿರಿಯರಿಂದ ಕಿರಿಯರಿಗೆದಾಟುತ್ತಲೇ ಇರುತ್ತವೆ.

ಇಲ್ಲಿರುವುದು ಬರೀ ಕುಂದು ಮಾತ್ರ ಎಂದು ಹೇಳುವುದು ನನ್ನ ಉದ್ದೇಶವಲ್ಲ. ಲೇಸು ಸಾಕಷ್ಟಿದೆ. ಆದರೆ ಕುಂದು ಸದ್ಯ ಕಣ್ಣಿಗೆ ಕುಕ್ಕುವುದರಿಂದ ಕೆದಕುವಂತಾಯಿತು.

ಜೊತೆಯಲ್ಲಿ ಇಲ್ಲಿನ ಹೆಣ್ಣೊಂದು ಮಾತನಾಡುವ ಭಂಗಿಗೂ ಮುನ್ನಿನ ಪುರಾಣದ ನಿಯಂತ್ರಣವಿದೆ. ಇಲ್ಲಿನ ಕಿರಿಯ ಹೆಣ್ಣುಗಳಿಗೆ ಹಿರಿಯ ಹೆಂಗಳೆಯರು ಕಟ್ಟಿಕೊಟ್ಟ ಬಿಸಿ ಬಿಸಿ ನೆನಪಿನ ಬುತ್ತಿಗಳು ಆ ಕಥೆಗಳು. ಅವರ ಹೊಟ್ಟೆಯೊಳಗೆ ಅಡಗಿ ರಕ್ತಗತವಾದ ಈ ರಾಗಗಳು ಇಂದು ಈ ಊರಿನ ನೆಲ, ಜಲ, ಆಕಾಶ, ಗಾಳಿ, ಬೆಂಕಿಗಳಲ್ಲಿ ಬೆರೆತಿದ್ದನ್ನು ಇತಿಹಾಸ ಕಂಡಿಲ್ಲ. ಈ ಪಂಚಭೂತಗಳನ್ನು ಅನುಭೋಗಿಸುವ ಇಂದಿನ ಹೆಣ್ಣುಗಳ ದೀನತೆ ಅಥವಾ ದಿವಾಳಿ ಯಾವುದಿದ್ದರೂ ಆದು

ಊರೋರ್ ಹೇಳತ್—ಈಗ ಅದ್ ಸಾಕಾಯ್ತಲ್ಲೆ ಅಂದ್ ಕಾಣತ್. ತಿಂಗಳ್ ಬೆಳ್ಳಿಗೆ ನೇಗಿಲ್ ಕಟ್ಟಿ ಹೂಡೋದ್ ಹೋದ್ಯೆಂಬ್ರಲೇ."

ಅಜ್ಜಿಯು ಉತ್ತರಿಸುತ್ತಿದ್ದಳು, "ಸ್ವಲ್ಪ ಸುಮ್ನಿರ್ತ್ಯಾ, ಊರ್ ಹೇಳೂಕೆ ನೀ ಕೇಂಬ್ಯೆ. ಒಂದ್ ಹಣ್ಣದ್ ಮರಕ್ ಹತ್ ಕಲ್, ಒಂದ್ ಹೆಣ್ಣದ್ ಮನಿಗ್ ಹತ್ ಕಣ್ ಅಂತ್ಹೇಳಿ ಸುಮ್ನೆ ಇದ್ದ್ ಮಾತಾ? ಸುಬಾ ಸುಮ್ನೆ ಯಾರೂ ಈಚನ್ರ್ ಏನೂ ಹೇಳೋರ್".

ಅಮ್ಮನಿಗೆ ಸಮಾಧಾನವಾಗಲಿಲ್ಲ ಅಂತ ಕಾಣುತ್ತು. ಅವಳು ಮುಂದುವರಿಸಿದ್ದಳು. "ಅಣ್ಣಾದಿ ಮನಿ ತಮ್ಮಯ್ಯ ಕಂಡೀನಂಬ್ರೆ. ದೊಡ್ ಬೆಳಗಿನ ಜಾವದ ಹೊತ್ತಿಗೆ ಬೆಳ್ಳಿ ಮೂಡ್ದಾಗ ಎದ್ ಮನ್ನಾಕೊಂಡು ಹೊಲಕ್ಕೆ ಹೋರ್ಟ ಕಂಬಳಕ್ಕೆ ತ್ತಿಗೆ ತೋಡಲ್ ಎತ್ತಿನ್ ಹೊಡ್ಕಂಡ್ ಹೋತ್ ಯಾರಂಕ್ಹೇಳಿ ಕಂಡನಂಬ್ರ್. ಈ ಮಾರಾಯ್ತಿ ಗಂಡ್ ಗನ್ನನ್ ಕಣಂಗೆ ಎತ್ತೀನ್ ಬೆನ್ನಾರೆ ಇದ್ದಂಬ್ರ್. ಸಾಲ್ದಿದ್ಕೆ ನೇಲ್ ಮೇಳಿ (ನೇಗಿಲು ಮೇಳಿ) ಹಿಡ್ಕಂಡಿದ್ದಳಂಬ್ರ್. ತಂಗೇನ್, ನಾನೂ ಮಾತಾಡ್ಸ್ಲಿ ಹೋಯಿಲ್ಲ ಅಂತ್ ಇದ್ದಾಪ್ರ್ ಹತ್ರ ಎಲ್ಲ ಹೇಳ್ತಿದ್ರಪ್ಪ."

ನನಗೂ ಆಶ್ಚರ್ಯವೇ ಆಯಿತು. ಜೊತೆಯಲ್ಲಿಯೇ ಪ್ರಶ್ನೆಗಳೂ ಹುಟ್ಟಿದುವು. ಆ ರಾತ್ರಿಯಲ್ಲಿ ಅದೂ ಎತ್ತು ನೇಗಿಲುಗಳ ಜೊತೆ ಆಕೆ ಹೊರಟ ಚಿತ್ರವನ್ನು ನೆನಸಿಕೊಂಡೆ. ಆದರೆ ಅದನ್ನು ಸತ್ಯವೆಂದು ಒಪ್ಪೋಣವೆ? ಬೇಡವೆ? ತಮ್ಮಯ್ಯನೇನಾದರೂ ಕನಸು ಕಂಡನೆ? ಏನಾದರೂ ಹಗೆತನವಿದ್ದು ಈ ರೀತಿಯ ಕಳಂಕವನ್ನು ಹಚ್ಚುವ ಚಪಲವನ್ನು ತೋರಿರಬಹುದೆ? ಹೇಳಿದ್ದೇ ಸುಳ್ಳಾಗಿರಬಹುದೆ? ಅವಳಲ್ಲಿಯೇ ಏನಾದರೂ ಉದ್ದೇಶ ಅಡಗಿರಬಹುದೆ?

ವಿಚಾರಿಂದ ಎಳೆಯನ್ನು ಅಷ್ಟು ಸುಲಭದಲ್ಲಿ ಬಿಡಕೊಡಬಾರದೆಂದು ನಿರ್ಧಾರವನ್ನು ತಂದು ಕೊಂಡೆ. ಕರಾವಳಿ ಜಿಲ್ಲೆಯ ಕುಂದಾಪುರದ ಸುತ್ತಲಿನ ಈ ಭಾಗ

(ಮೂರನೆ ಪುಟಕ್ಕೆ)

ಪ್ರಯತ್ನ

ಕನಸುಗಳಲ್ಲಿ ಮಾಯವಾದವಳನ್ನು
ಹುಡುಕಲೆಂದು ಒಂದು ಯತ್ನ—
ಎಲ್ಲ ಕನಸುಗಳಲ್ಲ
ಕೆಲವು ನನಸುಗಳೆಂದು
ತಿಳಿದಿಲ್ಲ ಅವಳಿಗೆ
ನನ್ನ ಈ ವಿರಹಕ್ಕೆ
ಕನಸುಗಳಲ್ಲಿ ಆವಾಹಿಸುವ
ಸಾಮರ್ಥ್ಯವಿಲ್ಲ!

× × ×

ಇಳಿದಿದ್ದೇನೆ ಮಂಜುಹನಿಯ ಹುಲ್ಲಿನಲ್ಲಿ
ಬಿರುಗಾಳಿಯಲ್ಲಿ
ಅವಳು ರಾತ್ರಿ ಬೆಳದಿಂಗಳಲ್ಲಿ
ಇಲ್ಲಿ ಪವಡಿಸಿ ಎದ್ದು ಹೋಗಿದ್ದಾಳೆ!
ಅಲ್ಲೇ ಕನಸು ಚೂರುಗಳು ನನಗಾಗಿ
ಬಿಟ್ಟಿದ್ದಾಳೆ ಮಡಿಗಿ
ಜಾಲರಿಯಾದ
ಸೂರ್ಯಕಿರಣಗಳಲ್ಲಿ
ಹಿಡಿಯಲಸಾಧ್ಯವಾದ ಅವಳ ನೆನಪು!
ಮುಗಿಳುಗಗಳು ಅಲ್ಲೇ
ನಿಲ್ಲಲಾರದೆ ಕರಗಿ ಹೋಗಿವೆ.

× × ×

ನನ್ನ ಸಮುದ್ರ ತೀರದ ಮರಳಿನ
ವ್ಯರ್ಥವಾಗುವ ಹೆಜ್ಜೆಗಳನ್ನು
ಕಾಣಲಾರಳು ಅವಳು
ನಾನು ಹುಟ್ಟು ಹಾಕಿದ ದೋಣಿಯ
ಜಲರೇಖೆ ಕಾಣಲಾರಳು ಅವಳು

× × ×

ಎಲ್ಲೋ ದೂರದ ಕಾನನದಲ್ಲಿ
ಅರಳಿ ಅಳುವ ಪುಷ್ಪಗಳೆಡೆಯಲ್ಲಿ
ನಗುವ ಇವಳು
ನನ್ನ ಚಕ್ಷುಗಳಿಗೆ ಗೋಚರವಾಗುವುದಿಲ್ಲ
ಅದೇ-ಈಗ
ಅವಳು ಕನಸುಗಳಲ್ಲಿ ಕರಗಿ ಹೋಗಿದ್ದಾಳೆ.

—ಹರೀಶ ಪೆರ್ಲ

ಬಾಳಿನರ್ಥ?

ಉನ್ಮೇಷದ ಆ
ಕೆಲವು ಕ್ಷಣಗಳಲಿ
ನಾ ಕಂಡದ್ದು

ಕೆಂಪು ರಕ್ತ
ದೋಕುಳಿಯಾಟ;
ಭೋರ್ಗರೆವ .
ಗುಂಡಿನ ಸದ್ದು;

ಅವರವರಲ್ಲೆ ನೆತ್ತರ
ಹರಿಸುವ, ಹೀರುವ
ಉನ್ಮಾದದ ಕೆಚ್ಚು;

ಸ್ವಾಮಿಗಳ ವೈಯಕ್ತಿಕ ಕಾವು;
ಕತ್ತಲೆ ಮಠಗಳ
ಚಿತ್ತಲೆ ಮೋಜು;
ಉಳ್ಳವರ ದೌಲತ್ತು,
ಇಲ್ಲದವರ ಕಿಮ್ಮತ್ತು;

ಕೊಚ್ಚೆಯಲಿ ರೊಚ್ಚೆಯಾಗಿ
ಹುಳುವಾಗಿ ನರಳಿ
ಕೆಳುವಾದವರು;
ನೋಡಿದಲ್ಲೆಲ್ಲಾ ಕಾಣಬರುವ
ಬೆನ್ನಿಗಂಟಿದ ಹೊಟ್ಟೆ.

ತನ್ನಷ್ಟಕ್ಕೆ ತಾನೇ
ಮುಚ್ಚಿಕೊಂಡ ಕಣ್ಣಿಂದ
ಬೀಳುತಲಿದ್ದ ಆ...ಹನಿಗಳಿಗೆ
ಅರ್ಥೈಸುವ ರುಂಟೆ ?

—ಇಷರತ್ ನಿಸಾರ್

ಹಿಂದೆ, ಕೆರೆ ತುಂಬಾ ಆಳವಾಗಿತ್ತು ಎಂದು ಹೇಳುವವರು ಕೇಳುವವರು ಇದ್ದರು. ಊರಿಗೆ ಹೊಸದಾಗಿ ಮದುವೆಯಾಗಿ ಬಂದ ಹೆಂಡಂದಿರಿಗೆ ಗಂಡಂದಿರಿಂದ, ಹುಟ್ಟು ಅರಿವು ಬೆಳೆಯುತ್ತಿರುವ ಮಕ್ಕಳಿಗೆ ತಾಯಂದಿರಿಂದ, ತಂಗಿಗೆ ಅಕ್ಕನಿಂದ, ತಮ್ಮನಿಗೆ ಅಣ್ಣನಿಂದ... ಅಂತೂ ಅವರಿಂದ ಇವರಿಗೆ ತಿಳಿದು ಬಂದ ಮಾತುಗಳು. ಅದರ ಆಳವಿಸ್ತಾರದ ಮಾತುಗಳು ಇದ್ದವು ಎನ್ನುವುದು ಅಲ್ಲಿಗೇ ನಿಂತಿದ್ದರೆ ಆ ಗೋಜಿಗೆ ನಾನು ಹೋಗದಿರಬಹುದಿತ್ತು. ಸ್ಥಿತಿ ಹಾಗಿರಲಿಲ್ಲ.

ಊರಿನವರು ಸಣ್ಣ ಪುಟ್ಟ ಸೀಕುಗಳಿಗೆ ಮೊರೆ ಇಡುವ ಘಟಾ ಘಟಾ ದೈವ ಕೆಂಡದ ಹೈಗುಳಿ ಪ್ರತಿ ಸೋಮವಾರ ಅಮಾವಾಸ್ಯೆಯ ದಿನಗಳಲ್ಲಿ ಮುಸ್ಸಂಜೆಯ ಹೊತ್ತಿನಲ್ಲಿ ಕೆರೆಯಲ್ಲಿ ಮಿಂದು ಕೊಕ್ಕೇಶ್ವರನ ಸಾನ್ನಿಧ್ಯಕ್ಕೆ ಹೋಗುವುದು ಮತ್ತು ಆ ಹೊತ್ತಿನಲ್ಲಿ ಕೆರೆಗೆ ಹೋದವರನ್ನು ಮೆಟ್ಟಿ ಮುಳುಗಿಸುವುದು ಎಂಬ ನಂಬಿಕೆಯನ್ನು ಅದು ಕಟ್ಟಿಕೊಂಡಿದೆ. ಹಾಗೆಯೇ ಹಸಿಬಣಂತಿಯಿಂದ ಹಿಡಿದು ಪತ್ತಿಪ್ಪತ್ತಕ್ಕೇ ಕೆಂಪು ಸೀರೆಯೊಳಗೆ ನಡುಗಿ ಸರಳವಿ ವಿಧವೆಯರಾಗಿದ್ದುಕೊಂಡು ಅಥವಾ ಮದುವೆಯಾಗದೆ ಇದ್ದು ಏಳೆಗರ್ಭ ಧರಿಸಿದ ಹಸಿ ಹಸಿ ಜೀವಗಳನ್ನು ನುಂಗಿದ ಕೆರೆಯಾಗಿತ್ತು ಎನ್ನುವುದು ನನ್ನನ್ನು ಎಳೆದದ್ದು.

ಅಂತೂ ಊರಿನವರ ಪಾಲಿಗೆ ಅಪಶಕುನದ, ಅನಿಷ್ಟದ ಪ್ರತಿಮೆಯಂತೆ ಇತ್ತು ಆ ಕೆರೆ. 20-30ವರ್ಷಗಳ ಹಿಂದಿನ ವರೆಗೂ ಎಲ್ಲರಿಗೂ ಅದರಲ್ಲಿ ಕುತೂಹಲವೇ ಇದ್ದರೂ ಧೈರ್ಯವಹಿಸಿ ಮುಂದೆ ನಡೆದು ಆಳವ ನೋಡಿ ಗುಟ್ಟನ್ನು ರಟ್ಟು ಮಾಡುವ ಅಥವಾ ಅದರ ಕೆಸರನ್ನು ತೆಗೆದು ಶುದ್ಧಗೊಳಿಸುವ ಒಂದು ಸಣ್ಣ ಪ್ರಯತ್ನ ಮಾಡುವ ಕ್ರಿಯಾ ಶೀಲತೆ ಅಲ್ಲಿರಲಿಲ್ಲವಾಗಿತ್ತು.

ಇಷ್ಟೆಲ್ಲ ಇದ್ದರೂ ಊರಿನಲ್ಲಿ ಸಾಹಸಿ ಕುಳಗಳ ಕತೆಯೇನೂ ಕಡಿಮೆ ಇರಲಿಲ್ಲವೆನ್ನಿ. ಏಕೆ ಮಟ್ಟಿಗೆ ಅಂಥ ಕಟ್ಟುದವರು ಬೇಕೆ? ಹುಲಿ ಹಿಡಿದು ಧರೆ ಕಡಿದವರು ಬೇಕೆ? ಅಗ್ಗದ ಪುರಾಣಗಳು ಸಿಗುತ್ತವೆ.

ಊರು-ಕೇರಿ-ದೇವರು

೨

ಈ ಕೆರೆಯ ಪಶ್ಚಿಮಕ್ಕೆ ಮುಖ ಮಾಡಿದರೆ ಕಾಣಿಸುವುದು ಆ ದೇವಾಲಯಗಳು ಆದರಾಚೆ ಪಶ್ಚಿಮಕ್ಕೆ ಹರಡಿಕೊಂಡಿರುವುದು ಊರಿನ ವಿಶಾಲವಾದ ಬಯಲು

ತನ್ನ ಊಟದ ಬಟ್ಟಲನ್ನು ಮನೆಮಂದಿಯ ನಟ್ಟನಡುವೆ ಇಟ್ಟರೂ ಕೋಲ ಬಡಿಸ. ಇನ್ನು ಮುಂದಿಗಟ್ಟಳೆ ಆಸ್ತಿವಂತರ ಮನೆಯಲ್ಲೂ ಸದ್ದ ಲೆಕ್ಕದ ಅಕ್ಕಿಯನ್ನು ಕಲುದಿಯಿಂದ ದೊಡ್ಡ ಮನೆಯ ಯಜಮಾನ ಅಳೆದು ಕೊಡುತ್ತಿದ್ದುದು ಸಾಕಷ್ಟು. ದೊಡ್ಡ ದೊಡ್ಡ ಕುಟೋಳಿದಾಂಗರ ಮನೆಯಲ್ಲೂ ಹೆಂಗಸು ಕಸವೇ" ಎಂದು.

"ಈಗ ಹುಟ್ಟುವಳಿ ಎಲ್ಲ ಅಟ್ಟುವಳಿಯಲೇ" ಎಂದು ಗಂಭೀರವಾದ ವಿಷಯನ್ನು ಲಘುವಾಗಿಯೇ ಕೈಯಾಡಿಸುತ್ತಾ ಮುಗಿಸುತ್ತಾರೆ.

ಹಾಗೆಯೇ ನೂರರ ಸಂಖ್ಯೆಯ ಹುಟ್ಟುವಳಿದಾರರ ಮನೆಯಲ್ಲಿ ಹುಟ್ಟಿ ಅಂಥವೇ ಮನೆಗಳಿಗೆ ಮದುವೆಯಾಗಿದ್ದು ಮತ್ತೆ ಕೈಬಾಯಿ ಸೊನ್ನೆಯಾಗಿದ್ದು ತುತ್ತು ಅನ್ನಕ್ಕಾಗಿ ಅನ್ಯರನ್ನು ಆಶ್ರಯಿಸಿ ಬಾಳದೇ ಕಾದ ಸ್ಥಿತಿ ಇದ್ದ ಎಷ್ಟೋ ವಿಧವೆಯರು ಮೊನ್ನೆಯ ವರೆಗೂ ಇದ್ದರೂ. ಈಗೀಗ ಆ ಸಂಖ್ಯೆ ಕಡಿಮೆ ಆಗುತ್ತಿದೆ.

"ಗಂಡ್ಸಿಗ್ ಸಣ್ಣಂದ್ಲೇ ತಾಯಂಬ ಹೆಣ್ಣಂದ ಉಪದೇಶ ಸಿಕ್ತ್. ಮದಿ ಮಾಡ್ಕಂಡ್ ಹೆಣ್ಣನ್ ತರ್‍ಕ್ ಯಾಕೆ? ಕೆಲಸಕ್ಕೆ ರಾತ್ರಿ ಗಂಡನ್ ಹಸಿ ಅವ್ರ್ ಕಾಣ್ಕಡ್ದ್ ಹಗಲ್ಲ ರಾತ್ರಿ ಕೆಲಸ ಮಾಡ್ಕ್" ಎನ್ನುವ ಕ್ರೂರವಾದ ಕಟ್ಟುನಿಟ್ಟುಗಳು ಒಂದೆರಡು ಕಡೆಯಲ್ಲೇನಲ್ಲ.

ಇಂಥ ಮಾತುಗಳನ್ನು ಕಿವಿಯಾರೆ ಕೇಳಿ ಮನಸಾರೆ ಅನುಭವಿಸಿ ಉಗುಳು ನುಂಗಿ ದಿಪಕಳೆದ ಹಳೆಯ ಮುತ್ತೈದೆಯರು ಇಲ್ಲಿದ್ದಾರೆ. ಇಂಥ ದುಃಖ ತುಂಬಿದ ಮನಸ್ಸಿನ 'ಬಂದ ಹೆಣ್ಣು' (ಅಪ್ಪನ ಮನೆಯಲ್ಲಿ 'ಕೊಟ್ಟ ಹೆಣ್ಣು ಕುಲದ ಹೊರಗೆ' ಎಂದಾದವಳು.) ಒಲೆ ಬೆಂಕಿಯಲ್ಲಿ ಗೆಯ್ದುಗೆಯ್ದು ರೂಪ, ಮನಸ್ಸುಗಳು ವಿಕಾರಗೊಂಡರೆ ಆಗ ಅಗ್ನಿಯೇ ಸುಖವಾಗುತ್ತದೆ.

"ಬಂದ ಹೆಣ್ಣಿಗೆ ಒಂದು ಲೋಟ ಮಜ್ಜಿಗೆ ನೀರು ಸಿಗುವುದೇ ಹರಹರಾ. ಆದರೆ ಸೂಳೆ ಎಂಬ ಗೊಂಬೆ ಸೂಳೆ ಶೃಂಗಾರದಲ್ಲಿ ಬಂದ್ರೆ ಮನೆ ಮಂದಿ ಹಲ್ಲು ಬಿಟ್ಟಂದೇ (ಹಲ್ಲನ್ನು ಬಿಟ್ಟು) ಕಾಂಬ್ರ್. ಮಂದ್ಕೋಟಿ ಈ ದಪ್ಪದ ಸೊರ ಹಾಲನ್ನು ಕೊಡುವರು"

ಅಂಥ ಗಂಡುಗಳ ಹಿಂದೆ ಸೆರಗಿನ ಮರೆಯಲ್ಲಿ ಕಣ್ಣೀರನ್ನು ಕಾರಿಗಳಿಸಿಕೊಳ್ಳುತ್ತ, ನೆಲ ಕಚ್ಚಿದ, ಆ ಗಂಡಂಬ ಪ್ರಾಣಿಗಳನ್ನೇ ನಂಬಿದ ಕೈ ಹಿಡ್ದ ಹೆಂಡರ ಕತೆ ಒಂದಲ್ಲ, ಎರಡಲ್ಲ ನೂರಾರು ಇವೆ.

ಅಂತೂ 'ಉರಿ ಮುಖದವ್ಳ್' ಅಂತ ಅನ್ನಿಸಿ

ಹೊಸತಾಗಿ ರೂಪು ಕಟ್ಟಿಕೊಳ್ಳುವುದು ಪ್ರಯಾಸದ್ದು.

ಕಥೆ ಕುಂಟ ತೊಡಗಿತೆ? ಕ್ಷಮಿಸಿ, "ಜನ ಪುರಾಣದಲ್ಲಿ ಹುಗಿದುಕೊಂಡಿದ್ದೀರಿ ಏಕೆ?" ಎಂದು ನೀವು ಕೇಳುತ್ತೀರಿ. ನೆನಪುಗಳೇ ರೂಪ ಪಡೆದು ಆಕೆ ಆ ಕೆರೆ, ಆ ಊರು ಹಾಗೂ ಆ ದೇವರೊಂದಿಗೆ ಸಜ್ಜಿಸಿಕೊಳ್ಳುತ್ತಾ ನನ್ನನ್ನು ಸುತ್ತುತ್ತಿದ್ದರೆ ತಪ್ಪಿಸಿಕೊಳ್ಳುವುದು ಅಸಾಧ್ಯ.

೩ .

ಭೂತದಿಂದ - ವರ್ತಮಾನಕ್ಕೆ

ವಿಜ್ಞಾನ ಸೂರ್ಯನ ಬೆಳಕು ಊರಿನ ಬದುಕಿನ ಹಿಮಗಡ್ಡೆಯೂ ಕರಗುವ ಗಳಿಗೆಗಳು ಬಂದವು. ಹೊಸ ಬದುಕಿನ ಉಸಿರನ್ನು ನೀಡುವ ತಾರು ರೋಡು ಊರನ್ನು ಪ್ರವೇಶಿಸಿದ್ದೇ ಗಂಡಸರು ಊರು ಬಿಟ್ಟರು. ಬೇರೆ ಬೇರೆ ಕಡೆ ಉಡುಪಿ ಬ್ರಾಹ್ಮಣರ ಊಟದ ಹೊಟೇಲುಗಳು ಕಾಣಿಸಿಕೊಂಡಂತೆ "ಹೋದವ್ರ್ ಬಂದವ್ರ್ ಎಂಜ್ಲೆತ್ತಿ ರೀತಿ ರಿವಾಜು ಹಾಳಾಯ್ತು" ಎಂದು ಕೇರಿಯ ಹಳೆಯವರು ಗೊಣಗಿ ಗೋಣು ಮುರಿದರು. ಅವರೆದುರಿಗೆ ಊರು ಸುಧಾರಿಸಿತು ಎಂದು ಎಳೆಯವರು ಮೀಸೆ ತೀಡಿಕೊಂಡರು. ಕೊನೆಗೆ ಯಾರೋ ಒಬ್ಬರಿಂದ ಕೆರೆಗೂ ಪಂಪು ಸೆಟ್ಟಿನ ನೆಂಟಾಯಿತು. ಕಟ್ಟೆಯನ್ನೂ ಕಟ್ಟಿದರು. ಕೆರೆಯೊಳಗೆ ಮಲಗಿದ ಪ್ರೇತ ಪಿಶಾಚಿಗಳೇನೋ ರಾಚಿ ಹೋದವು. (ಆದರೂ ಕೆರೆ...)

ಈ ಮಧ್ಯೆ, ಈಗ ಆ ಕೆರೆಯಲ್ಲಿ ಹಗಲು ಹೊತ್ತಿನಲ್ಲಿ ದನ ಕರುಗಳ ನೀರನ್ನು ಕುಡಿಯುವುದನ್ನೂ ಮಕ್ಕಳು ಮುದುಕರಾದಿಯಾಗಿ ಎಲ್ಲರೂ ಶುದ್ಧಿ ಕೆಲಸವನ್ನು ಮಾಡಿಕೊಳ್ಳುವುದನ್ನೂ, ತಡಿಕೆ ಮಾಡಲಿಕ್ಕೋಸ್ಕರ ನೇಯದ ತೆಂಗಿನ ಮಡಲುಗಳನ್ನು ಕಟ್ಟು ಮಾಡಿ ನೆನೆಯ ಬಿಡುವುದನ್ನೂ...ಹೀಗೆ ಅನೇಕ ರೀತಿಯಲ್ಲಿ ಕೆರೆ ಉಪಯುಕ್ತವಾದುದನ್ನು ನೋಡಬಹುದು. ಈ ಹೊತ್ತಿನಲ್ಲಿ ಸಂಭವಿಸಿದ ಕಥೆಗೆ ಈಗ ಬರುತ್ತಿದ್ದೇನೆ.

೪

ಊರು ಕೇರಿಯೊಳಗಿನ ಆ ಹೆಣ್ಣಿನ ಕಥೆ

ಆ ಕೆರೆಯನ್ನು ಹೊಂದಿದ 'ಹಳ್ಳ-ಕೇರಿ' ಹೆಸರಿನ ಆ ಊರಲ್ಲಿ ಹರಡಿಕೊಂಡಿದ್ದ ಮಾತು ಅಮ್ಮನ ಪ್ಲಾಲಗೆಯಿಂದ ಹೊರಬಿದ್ದು ಗಾಳಿ ಸೇರುತ್ತಿತ್ತು.

"ಅಲ್ಲ, ಆ ಸಾವಿತ್ರಿ ಹೆಣ್ಣಿಗ್ ಏನಾಯ್ತ್? ಹೆಣ್ಣ ಕೊಟ್ಟ ಮರ ಹೆಣ್ಣಿಗ್ ಎಂದ್ ಮೊದ್ಲೇ

ದೀಪಿಕಾ, ಪೂನಾ

ಸಾಯುವ ಮೊದಲು ಅತ ಪರಿಚಿತನೇ ಆಗಿದ್ದ. ಈಗೇಕೆ ರಗಳೆ ಅಂತ ಸುಮ್ಮನೇ ಬಂದುಬಿಟ್ಟೆ.

ಮಕ್ಕಳ ತೋಟ

ನೀಚ ಬುದ್ಧಿಯ ತೋಳ

ಒಂದು ನದಿಯ ದಡದ ಬಂಡೆಗಲ್ಲಿನ ಗುಹೆಯಲ್ಲಿ ಒಂದು ತೋಳವು ವಾಸವಾಗಿರುತ್ತಿತ್ತು. ರಾತ್ರಿ ಹೊತ್ತು ಪ್ರಾಣಿಗಳನ್ನು ಬೇಟೆಯಾಡಿ ತಿಂದು ಹಗಲೆಲ್ಲಾ ನಿದ್ದೆ ಮಾಡುತ್ತಿತ್ತು.

ಒಂದು ಸಲ ದೀಪಾವಳಿಯ ದಿನ ಜೋರಾಗಿ ಮಳೆ ಬಂದುದರಿಂದ ನದಿಯು ತುಂಬಿ ಹರಿಯಿತು. ನೀರಿನ ಪ್ರವಾಹವು ತೋಳ ವಾಸವಾಗಿರುವ ಬಂಡೆಗಲ್ಲನ್ನೂ ಮುತ್ತಿತು. ಆ ದಿನ ತೋಳ ಊಟವನ್ನು ಹುಡುಕಲು ಹೋಗುವುದು ಸಾಧ್ಯವಾಗಲಿಲ್ಲ. ಆಂದಿನೂಟಕ್ಕೆ ಹನ್ನು ಬೇರೆ ಏನೂ ಇಲ್ಲದಿದ್ದುದರಿಂದ ಅದಕ್ಕೆ ಬಹಳ ಹಸಿವಾಯಿತು. ಆದರೂ ಅದು ಬೇಸರಿಸಲಿಲ್ಲ. "ಹೇಗೂ ಇಂದು ಶುಭದಿನ. ಆದುದರಿಂದ ನಾನು ವ್ರತವನ್ನಾಚರಿಸುವೆನು" ಎಂದುಕೊಳ್ಳುತ್ತಾ ಬಂಡೆಕಲ್ಲಿನ ಒಂದು ಮೂಲೆಯನ್ನು ಸೇರಿ ದೇವರನಾಮ ಹೇಳುತ್ತಾ ಕುಳಿತುಕೊಂಡಿತು. ಅಷ್ಟರಲ್ಲಿ ಪ್ರವಾಹಕ್ಕೆ ಸಿಲುಕಿದ್ದ ಒಂದು ಆಡು ಒಂದು ಬಂಡೆಗಲ್ಲಿನಿಂದ ಇನ್ನೊಂದರ ಮೇಲೆ ಜಿಗಿಯುತ್ತಾ ಆ ಸ್ಥಳಕ್ಕೆ ಬಂದು ತಲುಪಿತು. ಅದನ್ನು ನೋಡಿದಾಕ್ಷಣ ತೋಳ ಒಮ್ಮೆಲೇ ಜಿಗಿದು ಆಡಿನ ಮೇಲೆ ಹಾರಿ ಬಿದ್ದಿತು. ಆದರೆ ಗುರಿ ತಪ್ಪಿಹೋಯಿತು. ಆಡು ವೇಗವಾಗಿ ಹರಿಯುತ್ತಿರುವ ಪ್ರವಾಹವನ್ನು ದಾಟಿ ತೋಳದಿಂದ ದೂರ ಹೋಯಿತು. 'ಬಹಳ ಒಳ್ಳೆಯದು' ಎಂದು ತೋಳ ತನ್ನ ಸಾಧು ಸ್ವಭಾವವನ್ನು ಪುನಃ ಧಾರಣ ಮಾಡುತ್ತಾ 'ನಾನು ಇಂದು ವ್ರತದ ಪವಿತ್ರ ದಿನದಲ್ಲಿ ಆಡಿನ ಮಾಂಸ ತಿಂದು ಅಪವಿತ್ರವಾಗಲಾರೆನು' ಎಂದುಕೊಂಡು ಪುನಃ ಭಕ್ತಿ ಭಾವದಲ್ಲಿ ಕುಳಿತಿತ್ತು. ಸ್ವಲ್ಪ ಹೊತ್ತಿನಲ್ಲಿ ಒಂದು ಮೊಲವು ಪ್ರವಾಹದಲ್ಲಿ ಬಂತು. ಮೊಲವನ್ನು ನೋಡಿದಾಗ ತೋಳ ಬಾಯಲ್ಲಿ ನೀರು ಸುರಿಸುತ್ತಾ ಮೊಲದ ಮೇಲೆರಗಿತು. ಆದರೆ ಆ ಸಲ ತೋಳ ವೇಗವಾಗಿ ಹರಿಯುತ್ತಿರುವ ನೀರಿನ ಪ್ರವಾಹಕ್ಕೆ ಬಿತ್ತು. ಅದು ಪ್ರವಾಹದಲ್ಲಿ ಕೊಚ್ಚಿಕೊಂಡು ಹೋಯಿತು.

ಕೆಟ್ಟ ಬುದ್ಧಿಯ ಜನರು ಎಷ್ಟೇ ಒಳ್ಳೆಯವರಾಗಲು ಪ್ರಯತ್ನಿಸಿದರೂ ಸಂದರ್ಭ ಬಂದಾಗ ಅವರ ಕೆಟ್ಟತನವು ಹೊರಬರುತ್ತದೆ.

— ಜಿ. ರಾಮಣ್ಣ ಅಲೆಟ್ಟಿ

ಮುಂಬಯಿಯ ಭೂಗತ ಜಗತ್ತು

(ಮೊದಲನೆ ಪುಟದಿಂದ)

ಆಗ ಸಹಾಯಕ್ಕೆ ಬಂದಾತ ಭೂಗತ ಜಗತ್ತಿನ ಏಕೈಕ ರಾಣಿ ಜೇನಾಬಾಯಿ ಚಿಟ್ಟಿ. (ಚಿಟ್ಟಿ ಅಂದರೆ ಸುದ್ದಿ ಎಂದರ್ಥ ಈಕೆ ಪೊಲೀಸರಿಗೆ ನೀಡುತ್ತಿದ್ದ ದಕ್ಕೆ ಈ ಅಡ್ಡ ಹೆಸರು) ಪೊಲೀಸರ ಜತೆ ನಿಕಟ ಸಂಪರ್ಕ ಹೊಂದಿದ್ದ ಈಕೆಯನ್ನು ಬಲ್ಲ ಇಬ್ರಾಹಿಂ ಕಸ್ಕರ್ ಮಕ್ಕಳ ಬಿಡುಗಡೆಗೆ ಆಕೆಯ ಸಹಾಯ ಯಾಚಿಸಿದ.

ಜೇನಾಬಾಯಿ ತನ್ನ ದತ್ತು ಮಗ ರಜ್ಜು ಮತ್ತು ಮಹೇಶ್ ದೋಲಕಿಯಾರನ್ನು ಕರೆದುಕೊಂಡು ಹೋಗಿ ಜಾಮೀನು ನೀಡಿಸಿ ನಾಗ್‌ಪಾಡ ಪೊಲೀಸ್ ಠಾಣೆಯಿಂದ ಇಬ್ರಾಹಿಂ ಸೋದರರನ್ನು ಬಿಡುಗಡೆಗೊಳಿಸಿದರು.

ಜೈಲು ನೋಡಿ ಬಂದ ಇಬ್ರಾಹಿಂ ಸೋದರರು ಮತ್ತು ಪಠಾಣರ ತಂಡದ ಕಾರ್ಯಾಚರಣೆಗೆ ನಿರಂತರ ಆತಂಕಗಳನ್ನೊಡ್ಡುತ್ತಲೇ ಬಂದರು. ಇಬ್ರಾಹಿಂ ಸೋದರರಿದ್ದಲ್ಲಿ ತಮ್ಮ ದಂಧೆ ಸಾಧ್ಯವೇ ಇಲ್ಲವೆಂದಾಗ, ಅಮೀರ್‌ಜಾದ ಅಲಮ್‌ಜೇಬ್, ಹಾಗೂ ಜಾಫರ್ ಕೂಡಿ ದಾವೂದ್‌ನನ್ನು ಮುಗಿಸಲು ನಿರ್ಧರಿಸಿದರು. ಅಮೀರ್‌ಜಾದನ ಅಪ್ಪ ಅವರನ್ನು ಕೊಲ್ಲುವುದನ್ನು ತಡೆದ.

ಒಂದು ದಿನ ಅಮೀರ್‌ಜಾದ ಮತ್ತು ಸಹಚರರು ರಸ್ತೆ ಬದಿಯಲ್ಲಿದ್ದಾಗ, ಸಬೀರ್ ಡ್ಯಾನ್ಸರ್ ಹುಡುಗಿಯೊಂದಿಗೆ ಕಾರಲ್ಲಿ ಹೋಗುತ್ತಿದ್ದುದು ಕಣ್ಣಿಗೆ ಬಿತ್ತು. ಸೇಡಿನ ಕಿಡಿ ಹತ್ತಿಕೊಂಡಿತು. ಇವರ ಕಾರು ಸಬೀರ್‌ನ ಬೆನ್ನಟ್ಟಿತು. ಪ್ರಭಾದೇವಿಯ ಪೆಟ್ರೋಲ್ ಬಂಕ್‌ನಲ್ಲಿ ಸಬೀರ್ ಕಾರು ನಿಲ್ಲಿಸಿದಾಗ ಆತನನ್ನು ಗುಂಡಿಕ್ಕಿ ಕೊಲ್ಲಲಾಯಿತು.

ವಿಜಯೋನ್ಮಾದದಿಂದ ಬೇಂಡಿಬಜಾರ್‌ಗೆ ದಾಳಿಯಿಟ್ಟ ಅಮೀರ್‌ಜಾದ ತಂಡ ಮುಸಾಫಿರ್‌ಖಾನ್‌ದ ಮೇಲೆ ಗುಂಡಿನ ಮಳೆಗರೆದರು. ಘರ್ಷಣೆಯಲ್ಲಿ ಅಮೀರ್‌ಜಾದಗೆ ಗುಂಡು ಬಿತ್ತು. ಆದರೆ ಬದುಕುಳಿದ.

ಅಣ್ಣನ ಕೊಲೆಯಿಂದ ದಾವೂದ್‌ನ ಎದೆಯಲ್ಲಿ ಹತ್ತಿಕೊಂಡ ಸೇಡಿನ ಜ್ವಾಲೆ ಅಂದಿನಿಂದ ಇಂದಿನವರೆಗೆ ಆಗಾಗ ಹಲವರನ್ನು ಬಲಿತೆಗೆದುಕೊಳ್ಳುತ್ತಲೇ ಇದೆ.

ಸಬೀರ್‌ನ ಕೊಲೆಗೆ ಪ್ರತೀಕಾರವಾಗಿ ಎರಡು ವರ್ಷದ ನಂತರ 1983ರಲ್ಲಿ ಅಮೀರ್‌ಜಾದನನ್ನು ನ್ಯಾಯಾಲಯದಲ್ಲಿಯೇ ದಾವೂದ್ ಕೊಲ್ಲಿಸಿದ. ಈ ಕೊಲೆ ನಡೆಸಿದವನು ರಾಜನ್ ನಾಯರ್. ಸಬೀರ್ ಕೊಲೆಗೆ ಸಂಬಂಧಿಸಿದಂತೆ ಬಂಧಿತನಾಗಿದ್ದ ಅಮೀರ್‌ಜಾದ ಆಗಲೇ ನ್ಯಾಯಾಧೀಶರನ್ನು ಖರೀದಿಸಿದ್ದಾನೆಂಬ ಸುದ್ದಿ ತಿಳಿದ ಕೂಡಲೇ ದಾವೂದ್ ತನ್ನ "ತೀರ್ಪು" ನೀಡಿದ್ದ.

ಸರಣಿಕೊಲೆ ಆರಂಭವಾಯಿತು. ಅಮೀರ್‌ಜಾದನ ಕೊಲೆಗೆ ಪ್ರತಿಯಾಗಿ ತಿಂಗಳ ಅವಧಿಯಲ್ಲೇ ಆತನ ತಂಡ ರಾಜನ್ ನಾಯರ್‌ನನ್ನು ವಿ.ಟಿ. ಸ್ಟೇಷನ್ ಸಮೀಪದ ಎಸ್ಪ್ಲನೇಡ್ ಕೋರ್ಟ್ ಆವರಣದಲ್ಲಿ ಗುಂಡಿಕ್ಕಿ ಕೊಲೆಗೈದಿತು. ಕೊಲೆಗೈದವ ದಕ್ಷಿಣ ಕನ್ನಡದ ಚಂದ್ರಶೇಖರ ಸಫಲಿಗ.

ಪೌರಾಧಿಕಾರಿಯ ವೇಷದಲ್ಲಿ ಬಂದಿದ್ದ ಸಫಲಿಗ ಮೂರು ದೂರದಿಂದಲೇ ನಾಯರ್‌ನನ್ನು ಮುಗಿಸಿದ್ದ. ಆದರೆ ದಕ್ಷಿಣ ಕನ್ನಡದ ಚತುರ ಕೊಲೆಗಾರ ತಪ್ಪಿಸಿ ಓಡಲು ಪ್ರಯತ್ನಿಸಿದರೂ, ಆತನದೇ ಊರಿನವರಾದ ದಕ್ಷಿಣ ಕನ್ನಡದ ಪೊಲೀಸ್ ಅಧಿಕಾರಿ ಶಶಿಕಾಂತ್ ಗುರು ಅವರೆದುರು ಆಟ ನಡೆಯದೆ ಬಂಧಿತನಾದ. ನಂತರ ಬಿಡುಗಡೆಯಾದರೂ ತನ್ನವರಿಂದಲೇ ಪ್ರಾಣಕಳೆದುಕೊಂಡ.

ಆ ಕಾಲದಲ್ಲಿ ಮುಂಬಯಿ ಭೂಗತ ಜಗತ್ತಿನ ಸಿಂಹಸ್ವಪ್ನ 'ಸುಪಾರಿ' ಕೊಲೆಗಾರ ಸಮದ್‌ಖಾನ್. ಈತ ದೊಂಗ್ರಿದೊರೆ ಕರೀಂಲಾಲನ ಪ್ರೀತಿಯ ಅಳಿಯ. ದಾವೂದ್‌ನ ಮುಂದಿನ ಬಲಿ ಸಮದ್‌ಖಾನ್. 1984ರ ಅಕ್ಟೋಬರ್‌ನಲ್ಲಿ ಸಮದ್‌ಖಾನ್ ಕೊಲೆಯಾದ. 19 ಗುಂಡುಗಳು ಆತನ ದೇಹವನ್ನು ಛಿದ್ರಗೊಳಿಸಿದ್ದುವು. 1985ರಲ್ಲಿ ಕರೀಂಲಾಲ ತಂಡದ ಬದುಕುಳಿದ ವ್ಯಕ್ತಿ ಸದಕ್ಕತ ಅಲಮ್‌ಜೇಬ್‌ಕೂಡಾ ಸೂರತ್‌ನಲ್ಲಿ ಪೊಲೀಸರ ಕೈಯಲ್ಲಿ ಹತನಾದ.

ತನ್ನವರನ್ನೆಲ್ಲ ಕಳೆದುಕೊಂಡ ಕರೀಂಲಾಲ ಕಾಲದ ಹೊಡೆತದಿಂದಲೂ ಜರ್ಝರಿತನಾಗಿದ್ದಾನೆ. ಈ ಮುದಿಸಿಂಹದ ಆಟ ಕೊನೆ ದೃಶ್ಯದಲ್ಲಿದೆ.

ಹೀಗೆ ತನ್ನ ಶತ್ರುಗಳೆಲ್ಲರ ಹುಟ್ಟಡಗಿಸಿದ ದಾವೂದ್ ಇಬ್ರಾಹಿಂ ದುಬ್ಬಾಯಿಯಲ್ಲಿ ಕೂತು ಭೂಗತ ಜಗತ್ತನ್ನು ಆಳುತ್ತಿದ್ದಾನೆ. ಮುಂಬಯಿಯಲ್ಲಿ ಈತನ ಸಾಮ್ರಾಜ್ಯವನ್ನು ಅಪ್ಪ ಇಬ್ರಾಹಿಂ ಕಸ್ಕರ್ ನೋಡಿಕೊಳ್ಳುತ್ತಿದ್ದ. ಮುಸಾಫಿರ್‌ಖಾನದಲ್ಲಿ ನಿತ್ಯ 'ದರ್ಬಾರ್' ನಡೆಸುತ್ತಿದ್ದ ಮುದುಕ ಕಸ್ಕರ್ ಮಾತಿಗೆ ಇದಿರಾಡುವವರು ಯಾರೂ ಇರಲಿಲ್ಲ. ದುಬ್ಬಾಯಿಗೆ ಹೋಗಿ ಅಲ್ಲಿ ಸತ್ತ ಕಸ್ಕರ್‌ನ ಹೆಣವನ್ನು ರಾಜಮರ್ಯಾದೆಯ ಮೆರವಣಿಗೆಯ ಮೂಲಕ ಮುಂಬಯಿಯಲ್ಲಿ ದಫನ ಮಾಡಲಾಗಿತ್ತು.

ಇತ್ತೀಚಿನ ವರ್ಷಗಳಲ್ಲಿ ದಾವೂದ್ ಮತ್ತು ಸಂಘರ್ಷ ನಡೆದದ್ದು ದೋಲಕಿಯ ಸೋದರರಾದ ಪ್ರವೀಣ್, ಲಲಿತ್, ಅರವಿಂದ್ ಮತ್ತು ಮಹೇಶ್ ಅವರೊಂದಿಗೆ. ಕಳ್ಳಭಟ್ಟಿ ನಿರ್ಮಾಣ ಮತ್ತು ವೇಶ್ಯಾವಾಟಿಕೆ ನಡೆಸುತ್ತಿದ್ದ ದೋಲಕಿಯ ತನ್ನ ಜತೆಯಲ್ಲಿ ಗಿರ್‌ಗಾಂನ "ಶೆಟ್ಟಿ ಕಂಪನಿ"ಯನ್ನು ಉಳಿಸಿಕೊಂಡಿದ್ದ.

ದಾವೂದ್‌ನ ಬಲಗೈ ಬಂಟನಾಗಿದ್ದ ಬೈಕುಲ್ಲಾದ ರಮಾ ನಾಯಕನಿಗೂ, ಶೆಟ್ಟಿ ಕಂಪೆನಿಗೂ ಆಗಾಗ ಘರ್ಷಣೆಯಾಗುತ್ತಲೇ ಇತ್ತು. ಇದೇ ಸಮಯದಲ್ಲಿ ದಾವೂದ್ ಮತ್ತೊಬ್ಬ ಪ್ರಮುಖ ಸಹಚರ ಬಾಬು ರೇಶಮ್ ಕೊಲೆಯಾದಾಗ ದಾವೂದ್ ಅದರಲ್ಲಿ ದೋಲಕಿಯ ಕೈವಾಡ ಗುರುತಿಸಿದ.

ಜೇಕಬ್ ಸರ್ಕಲ್ ಠಾಣೆಯಲ್ಲಿ ಬಂಧಿತನಾಗಿದ್ದ ಬಾಬು ರೇಶಮ್‌ನನ್ನು ಶಸ್ತ್ರಧಾರಿಗಳ ತಂಡ ಲಾಕಪ್‌ಗೆ ನುಗ್ಗಿ ಕೊಂದು ಹಾಕಿತ್ತು.

1987ರ ಮಾರ್ಚ್ 30ರಂದು ದೋಲಕಿಯಾ ಸೋದರರಲ್ಲಿ ಪ್ರಮುಖನಾಗಿದ್ದ ಮಹೇಶ್ ದೋಲಕಿಯ ಕೊಲೆಯಾಯಿತು. ಇದಕ್ಕೆ ಸಂಬಂಧಿಸಿ ರಮಾ ನಾಯ್ಕ್ ಕಂಪನಿಯ ಅರುಣ್‌ಗೌಳಿಯನ್ನು ಬಂಧಿಸಲಾಯಿತು. ಈತ ಬಂಧಿತನಾಗಿದ್ದಾಗಲೇ ಬಾಬು ರೇಶಮ್‌ನ ರೀತಿಯೇ ಈತನನ್ನು ಮುಗಿಸಲು ಸಂಚು ರೂಪಿಸಲಾಗಿತ್ತು. ಅದಕ್ಕಾಗಿ ಬಂದ ಇಬ್ಬರು ಕೊಲೆಗಡುಕರನ್ನು ಶಿವಾಜಿ ಪಾರ್ಕ್‌ನಲ್ಲಿನ ಹೋಟೇಲ್ ಪಾರ್ಕ್ ವೇಯಲ್ಲಿ ಪೊಲೀಸರು ಗುಂಡಿಕ್ಕಿ ಕೊಂದರು. ಈ ಸುಳಿವು ದಾವೂದ್ ನೀಡಿದ್ದನ್ನಲಾಗಿದೆ. ಇದರ ಬೆನ್ನಲ್ಲೇ ಅರವಿಂದ್ ದೋಲಕಿಯನ ಕೊಲೆಯತ್ನ ನಡೆಯಿತು. ಆದರೆ ಆತ ಬದುಕಿದ.

ದಾವೂದನ ತಣಿಯದ ರಕ್ತದಾಹದಿಂದ ಭೀತನಾದ ಅರವಿಂದ್ ದೋಲಕಿಯ ದಾವೂದನ ಜತೆ ರಾಜಿಗೆ ಪ್ರಯತ್ನಿಸಿದ. 1987ರ ಹಜ್ ಯಾತ್ರೆ ವೇಳೆ ಕರೀಂಲಾಲ್ ಮತ್ತು ದೋಲಕಿಯ ಜೆದ್ದಾದಲ್ಲಿ ದಾವೂದ್‌ನನ್ನು ಭೇಟಿಯಾದರು. ಆಗಲೇ ಕರೀಂಲಾಲನ ಮತ್ತೊಬ್ಬ ಸೋದರ ರಹೀಮ್ ಕೊಲೆಯಾಗಿದ್ದ.

ರಾಜಿ ಒಪ್ಪಂದಕ್ಕೆ ದಾವೂದ್, ಅರವಿಂದ್ ದೋಲಕಿಯನಿಂದ ಒಂದು ಕೋಟಿ ರೂಪಾಯಿ ಪರಿಹಾರ ಕೇಳಿದ. ಇದು ದೋಲಕಿಯನ ಪ್ರಾಣದ ಬೆಲೆ. ದೋಲಕಿಯ ಒಪ್ಪಿಕೊಂಡ.

ಎಲ್ಲವೂ ಮುಗಿಯಿತೆಂದು ಭೂಗತ ಜಗತ್ತು ನಿಟ್ಟುಸಿರು ಬಿಡತೊಡಗಿತ್ತು. ದಾವೂದ ಕೂಡಾ ನಿಷ್ಕ್ರಿಯ ಗುಂಗಿನಲ್ಲಿದ್ದ. ಸೂಕ್ತ ರಕ್ಷಣೆಕೊಟ್ಟರೆ ಶರಣಾಗುವುದಾಗಿ ಇಂಗ್ಲಿಷ್ ಪತ್ರಿಕೆಗೆ ಕೊಟ್ಟ ಸಂದರ್ಶನದಲ್ಲಿ ಹೇಳಿಕೊಂಡಿದ್ದ. ಹೂಳುವಷ್ಟು ಹಣ ಇದ್ದರೂ ಸಮಾಜದಲ್ಲಿ ಸ್ಥಾನ-ಮಾನವಿಲ್ಲದೆ ಕೀಳರಿಮೆಯಿಂದ ಕೊಳೆಯುತ್ತಿದ್ದ ದಾವೂದ್ ಇತ್ತೀಚೆಗೆ ವಿದೇಶಗಳಲ್ಲೂ ಹೋಟೇಲ್ ನಿರ್ಮಾಣಕ್ಕೆ ತೊಡಗಿದ್ದ. ಮುಂಬಯಿಯಲ್ಲಿಯೂ ಕಟ್ಟಡ ನಿರ್ಮಾಣಕ್ಕೆ ತೊಡಗಿದ್ದ.

ಈ ಸಂದರ್ಭದಲ್ಲಿಯೇ ಅ ವಿ ರೀ ಕ್ಷಿ ತ ವಾ ಗಿ ಮತ್ತೊಂದು ಬೆಳವಣಿಗೆ ನಡೆಯಿತು.

ದೋಲಕಿಯ ಜತೆ ರಾಜಿ ಮಾಡಿಕೊಂಡದ್ದು ದಾವೂದ್‌ನ ಬಂಟ ರಮಾನಾಯ್ಕ್‌ಗೆ ಸರಿಬೀಳಲಿಲ್ಲ. ಅದನ್ನು ತುಸು ಜೋರಾಗಿಯೇ ನಾಯ್ಕ್ ಪ್ರತಿಭಟಿಸಿದ್ದ. ಇತ್ತೀಚೆಗೆ ಮಲಾಡ್‌ನಲ್ಲಿನ ಒಂದು ಭೂಮಿಯ ಬಗ್ಗೆ ರಮಾನಾಯ್ಕ್‌ಗೂ ಜೋಗೇಶ್ವರಿಯ ಒಬ್ಬ ಕಟ್ಟಡ ನಿರ್ಮಾಪಕನಿಗೂ ಘರ್ಷಣೆ ನಡೆಯಿತು. ಇಬ್ಬರೂ ದಾವೂದನ ಆಪ್ತ ಬಂಟರು. ರಮಾನಾಯ್ಕ್ ದೂರು ದಾವೂದ್ ಬಳಿ ಕೊಂಡೊಯ್ದ. ದಾವೂದ್ ವಿಡಿಯೋ ನಿರ್ಮಾಣ ವ್ಯವಹಾರ ಪ್ರಾರಂಭಿಸುವ ಯೋಜನೆಯನ್ನು ನಾಯ್ಕ್ ಮುಂದಿಟ್ಟು ಅದರ ಲಾಭದ ಶೇ.40 ಭಾಗ ನೀಡುವುದಾಗಿ ಹೇಳಿದ. ನಾಯ್ಕ್ ಇದರಿಂದ ತೃಪ್ತಿಗೊಂಡಂತೆ ಕಾಣಲಿಲ್ಲ.

ಈ ಸುದ್ದಿ ಅರವಿಂದ ದೋಲಕಿಯ ಕಿವಿ ತಲುಪಿದೊಡನೆ, ಆತ ರಮಾನಾಯ್ಕ್‌ನನ್ನು ತನ್ನ ಗುಂಪಿಗೆ ಸೇರಿಸಲು ಪ್ರಯತ್ನಿಸಿದ. ರಾಜಿ ಒಪ್ಪಂದದಂತೆ ದಾವೂದ್‌ಗೆ ಕೊಡಬೇಕಾಗಿದ್ದ ಪರಿಹಾರ ಹಣದಲ್ಲಿ 60ಲಕ್ಷ ರೂಪಾಯಿ ರಮಾನಾಯ್ಕ್‌ಗೆ ನೀಡುವ ಆಮಿಷ ಒಡ್ಡಿದ. ರಮಾನಾಯ್ಕ್ ಅದನ್ನು ನಿರಾಕರಿಸುವ ಸ್ಥಿತಿಯಲ್ಲಿರಲಿಲ್ಲ.

ಆಗಲೇ ರಮಾನಾಯ್ಕ್ ಸ್ವತಂತ್ರ ವ್ಯವಹಾರ ನಡೆಸುವ ಆಕಾಂಕ್ಷೆ ಹೊಂದಿದ್ದ. ಕಾಲ ಕೂಡಿ ಬಂದಿತ್ತು. ಅರುಣ್‌ಗೌಳಿಯನ್ನು ಜತೆಯಲ್ಲಿ ಸೇರಿಸಿಕೊಂಡು ದಾವೂದ್‌ನ ಮುಂಬಯಿ ವ್ಯವಹಾರಗಳನ್ನು ಸೆಳೆದುಕೊಳ್ಳಲು ಎಲ್ಲ ತಯಾರಿ ನಡೆಸಿದ್ದ.

ಈ ಸುದ್ದಿ ದಾವೂದ್‌ಗೆ ತಲುಪಿತು. ಕಳೆದ ಜುಲೈ 22 ರಂದು ರಮಾನಾಯ್ಕ್ ಪೊಲೀಸರ ಜತೆ ನಡೆದ ಘರ್ಷಣೆಯಲ್ಲಿ ಮೃತನಾದ. ಚೆಂಬೂರು ಪಾರ್ಕ್‌ನ ಎದುರಲ್ಲೇ ಈ ಘಟನೆ ನಡೆದಿತ್ತು. ತನ್ನ ಮಾರುತಿಕಾರಲ್ಲಿ ಬಂದು ಸೆಲೂನ್‌ಗೆ ಹೋಗಲು ಕಾರಿನಿಂದ ಕೆ ಳ ಗಿ ಳಿ ಯು ತ್ತಿ ದ್ದಂ ತೆ ನಾಗ್‌ಪಾಡ ಪೊಲೀಸ್ ಠಾಣೆಯ ಸಬ್‌ಇನ್‌ಸ್ಪೆಕ್ಟರ್ ರಾಜನ್ ಕಾಟ್‌ದಾರೆ ಅವನನ್ನು ಹೊಡೆದುರುಳಿಸಿದ್ದ. ಮಾದಕದ್ರವ್ಯದ ಮತ್ತಿನಲ್ಲಿದ್ದ ನಾಯ್ಕ್ ಎದುರಿಸುವ ಸ್ಥಿತಿಯಲ್ಲಿರಲಿಲ್ಲ. ಇದು ದಾವೂದ್‌ನ ಕೃತ್ಯ ಎಂದು ನಾಯ್ಕ್‌ನ ತಂಡದ ಆಪಾದನೆ. ನಾಗ್‌ಪಾಡ ಪೊಲೀಸ್ ಠಾಣೆಯ ಸಬ್‌ಇನ್‌ಸ್ಪೆಕ್ಟರ್ ಚೆಂಬೂರ್‌ಗೆ ಬಂದು ನಾಯ್ಕ್‌ನನ್ನು ಯಾಕೆ ಬೇಟೆಯಾಡಬೇಕು? ಅದೂ ದಾವೂದ್ ತಂಡವನ್ನು ಅಗಲಿದ ನಂತರ. ಇದು ಅವರ ಪ್ರಶ್ನೆ. ಈ ಕೃತ್ಯ 15 ಲಕ್ಷ ರೂಪಾಯಿ ಮೌಲ್ಯದ 'ಸುಪಾರಿ' ವ್ಯವಹಾರವೆನ್ನಲಾಗಿದೆ.

ಸೇಡಿನ ಕಿಚ್ಚಿನಿಂದ ಕುದಿಯುತ್ತಿದ್ದ ರಮಾ ನಾಯ್ಕನ ತಂಡ ಪುನರ್ ಸಂಘಟಿತಗೊಂಡು ಅರುಣ್ ಗೌಳಿಯನ್ನು ತನ್ನ ನಾಯಕನನ್ನಾಗಿ ಆರಿಸಿತು. ಸಹಾಯಕನಾಗಿ ಅಶೋಕ್ ಜೋಷಿ ಸೇರಿಕೊಂಡ.

ನವೆಂಬರ್ 21 ರಂದು ಅವರು ದಾವೂದ್‌ನ ಮುಂಬಯಿ ಸಂಪರ್ಕತಂತು ಸತೀಶ್‌ರಾಜೆಯನ್ನು ಬೈಕುಲಾದಲ್ಲಿ ಹಾಡು ಹಗಲೇ ಸಿಗ್ನಲ್‌ಲೈಟ್ ಇದಿರಲ್ಲಿ ಹೊಡೆದುರುಳಿಸಿದರು. ಪರೋಕ್ಷವಾಗಿ ಅದು ದಾವೂದ್‌ಗೆ ಕೊಟ್ಟ ಎಚ್ಚರಿಕೆ.

ದುಬ್ಬಾ ಜಾಗೃತವಾಯಿತು. ನವೆಂಬರ್ 27 ರಂದು ಅರವಿಂದ ಧೋಲಕಿಯನನ್ನು ಆತನ ರಕ್ಷಣಾ ಕೋಟೆಯಾದ ಕ್ರಾಸರ್ ಪ್ಯಾಲೇಸ್‌ನಲ್ಲಿಯೇ ಗುಂಡಿಕ್ಕಿ ಕೊಲ್ಲಲಾಯಿತು. ಆತನ ಅಣ್ಣ ಮಹೇಶ್ ದೋಲಕಿಯನ ಅಂಗರಕ್ಷಕರೇ ಈ ಕೆಲಸ ಮಾಡಿದ್ದರು. ಈ ಕೃತ್ಯ ಯಾರು ನಡೆಸಿರಬಹುದೆಂಬ ಬಗ್ಗೆ ಭಿನ್ನಾಭಿಪ್ರಾಯವಿದೆ. ದಾವೂದ್‌ನ ಕೃತ್ಯವೆಂದೇ ಹಲವರು ನಂಬಿದಂತಿದ್ದರೂ ಅದು ವಿವಾದಾಸ್ಪದವಾಗಿ ಉಳಿದಿದೆ.

ಸತೀಶ್ ರಾಜೆಯ ಹತ್ಯೆಯ ಪ್ರತೀಕಾರ ನಿಜವಾಗಿ ನಡೆದದ್ದು ಪನ್‌ವೇಲ್‌ನಲ್ಲಿ. ರಾಜೆಯ ಕೊಲೆಗೈದವರಲ್ಲೊಬ್ಬನಾದ ಅಶೋಕ್ ಜೋಷಿ ಮತ್ತು ಉಳಿದ ನಾಲ್ಕು ಮಂದಿ ಪನ್‌ವೇಲ್ ಸಮೀಪ ಕಾರಿನಲ್ಲಿ ಹೋಗುತ್ತಿದ್ದಾಗ ಮುತ್ತಿಗೆ ಹಾಕಿ ಐದು ಮಂದಿಯನ್ನು ಗುಂಡಿಕ್ಕಿ ಕೊಲ್ಲಲಾಯಿತು. ಈ ಹತ್ಯೆಗೆ ಸಂಬಂಧಿಸಿದವರನ್ನು ಬಂಧಿಸಲಾಗಿದ್ದರೂ, ನಿಜವಾದ ಕೊಲೆಗಡುಕರು ಸುರಕ್ಷಿತರಾಗಿದ್ದಾರೆಂದು ಹೇಳಲಾಗಿದೆ.

ಈಗ ಕೊಲೆಗಳ ಸರಮಾಲೆ ಒಂದು ಸುತ್ತು ಪೂರ್ಣಗೊಳಿಸಿದೆ. ಸದ್ಯ ದಾವೂದ್‌ಗೆ ಸವಾಲೆಸೆಯಬಲ್ಲ ಗಟ್ಟಿ ಎದೆ ಯಾರಿಗೂ ಇಲ್ಲ. ಆದರೆ ವಿರೋಧಿ ಪಾಳೆಯದಲ್ಲಿ ಉಳಿದಿರುವ ಅರುಣ್ ಗೌಳಿ ಮತ್ತು ಅರುಣ್ ಅಸ್ವಾನ ಮುಂದಿನ ದಿನಗಳಲ್ಲಿ ದಾವೂದ್‌ನ ಪ್ರಮುಖ ಪ್ರತಿಸ್ಪರ್ಧಿಗಳಾಗುವ ಎಲ್ಲ ಸಾಧ್ಯತೆಗಳಿವೆ.

ದಾವೂದ್ ಜತೆಯಲ್ಲಿ ಸ್ಮಗ್ಲಿಂಗ್ ವಸ್ತುಗಳ ವಾಹಕನಾಗಿ ಬೆಳಕಿಗೆ ಬಂದ ಅರುಣ್‌ಗೌಳಿ ಕಿರು ಅವಧಿಯಲ್ಲೇ ಕುಖ್ಯಾತ ಕ್ರಿಮಿನಲ್ ಎಂಬ ಖ್ಯಾತಿ ಪಡೆದವ.

ಮೇಲ್ನೋಟಕ್ಕೆ ಮುಂಬಯಿ ಭೂಗತ ಜಗತ್ತೀಗ ಶಾಂತವಾಗಿರುವಂತೆ ಕಂಡರೂ ಅದೊಂದು ಬೂದಿಮುಚ್ಚಿದ ಕೆಂಡ. ಯಾವುದೇ ಕ್ಷಣದಲ್ಲಿ ಅದು ಮತ್ತೆ ಹತ್ತಿಕೊಂಡು ಹಲವರನ್ನು ಬಲಿತೆಗೆದುಕೊಳ್ಳಬಹುದು.

ಕುಬೇರ

(ಮೊದಲ ಪುಟದಿಂದ)

ಮುಸಾಫಿರ್‌ಖಾನದಲ್ಲಿ ದಾವೂದನ ಅಪ್ಪ 'ಅಬ್ಬಾ' ಎಂದೇ ಖ್ಯಾತನಾದ ಶೇಖ್ ಇಬ್ರಾಹಿಂ ಕಸ್ಕರ್ ನಿತ್ಯ 'ದರ್ಬಾರ್' ನಡೆಸಿ ತೀರ್ಪು ನೀಡುತ್ತಿದ್ದ. ಆ ಹೊತ್ತಿನಲ್ಲಿ ಬೀದಿಯಲ್ಲಿ ಕಾಣಸಿಕೊಂಡ ಜನ 'ಸಲಾಮ್' ಸಲ್ಲಿಸದೆ ಮುಂದುವರಿಯುವ ಹಾಗಿರಲಿಲ್ಲ. 'ಅಬ್ಬಾ' ಸತ್ತ ಮೇಲೆ ಆ ದರ್ಬಾರ್ ಮಕ್ಕಳು ನಡೆಸುತ್ತಿದ್ದಾರೆ.

ಹಿರಿಯವ ಸಬೀರ್ ಕೊಲೆಗೀಡಾದರೆ ದಾವೂದ್ ದುಬ್ಬಾಯಿಯಲ್ಲಿದ್ದಾನೆ. ಇಲ್ಲಿನ ವ್ಯವಹಾರವನ್ನು ಇಕ್ಬಾಲ್ ನೂರಾ ಹಾಗೂ ಅನೀಸ್ ನೋಡಿಕೊಳ್ಳುತ್ತಿದ್ದಾರೆ.

ಇತ್ತೀಚೆಗೆ ಮುಸಾಫಿರ್‌ಖಾನಕ್ಕೆ ಆಗಾಗ ಪೊಲೀಸರು ದಾಳಿ ನಡೆಸುತ್ತಿದ್ದಾರೆ. 'ಡಿ'ಕಂಪನಿ ಇದರಿಂದ (ಹಾಗೆಯೇ ಭೂಗತ ಜಗತ್‌ನ 'ದಾವೂದ್ ಕಂಪನಿ' ಖ್ಯಾತ) ವಿಚಲಿತಗೊಂಡಿಲ್ಲ. ದಾವೂದ್ ವರ್ಷಕ್ಕೆ 1,000 ಕೋಟಿ ವ್ಯವಹಾರದ ಚಿನ್ನ ಕಳ್ಳ ಸಾಗಾಣಿಕೆ ನಡೆಸುತ್ತಿದ್ದಾನೆಂದು ಹೇಳಲಾಗಿದೆ. ಸರಳ ಲೆಕ್ಕಾಚಾರದ ಪ್ರಕಾರ ಚಿನ್ನ ಒಂದರಿಂದಲೇ ಆತನ ವಾರ್ಷಿಕ ವರಮಾನ ಕೇವಲ 300 ಕೋಟಿ ರೂಪಾಯಿಗಳು! ಇದರ ಜತೆಗೆ 500 ಕೋಟಿ ರೂಪಾಯಿ ವ್ಯವಹಾರದ ಮಾದಕ ದ್ರವ್ಯ, ಎಲೆಕ್ಟ್ರಾನಿಕ್ಸ್ ಸಾಮಾನು ವಿದೇಶಿ ಕರೆನ್ಸಿಯ 'ಹವಾಲ ಜಾಲ' ಮತ್ತು ಕಟ್ಟಡ ನಿರ್ಮಾಣ. ಈ ಕುಬೇರನ ಒಟ್ಟು ಸಂಪತ್ತಿನ ಮೌಲ್ಯ ಎಷ್ಟಿರಬಹುದು? ಲೆಕ್ಕ ಮುಗಿಯಲಾರದು!

ನಶೆಯಲ್ಲಿ....

(ಮೊದಲ ಪುಟದಿಂದ)

ಹಾಂಗ್‌ಕಾಂಗ್, ದುಬ್ಬಾ, ಸಿಂಗಾಪುರ್ ಮತ್ತು ಬ್ಯಾಂಕಾಕ್‌ಗಳಿಂದ ರವಾನೆಯಾಗುತ್ತಿರುವ ಕ್ಯಾಮರಾಗಳಲ್ಲಿ ಚಿನ್ನ ಕಳ್ಳಸಾಗಣಿಕೆಯಾಗುತ್ತಿದೆಯಂತೆ.

ಈ ಕಳ್ಳಸಾಗಾಣಿಕೆದಾರರಿಗೆ ವಿದೇಶದಲ್ಲಿ ಚಿನ್ನ ಕೊಳ್ಳಲು ವಿದೇಶಿ ಕರೆನ್ಸಿ ಬೇಕು. ಇದನ್ನು ಪೂರೈಸಲೆಂದೇ ಮುಂಬೈಯಲ್ಲಿ ವ್ಯವಸ್ಥಿತವಾದ 'ಹವಾಲ' ವ್ಯವಹಾರ ನಡೆಯುತ್ತಿದೆ.

'ಅವಕಾಶ ಮತ್ತು ಪ್ರವೃತ್ತಿ ಕೂಡಿಬಂದಾಗ ಅಪರಾಧ ಸಾಧ್ಯವಾಗುತ್ತದೆ' ಎನ್ನುವ ನಿವೃತ್ತ ಪೊಲೀಸ್ ಅಧಿಕಾರಿಯೊಬ್ಬರ ಮಾತು ಮುಂಬಯಿ ಭೂಗತ ಜಗತ್ತಿಗೆ ಬರೆದ ಭಾಷ್ಯ.

ಈ ಹಿನ್ನೆಲೆಯಲ್ಲಿಯೇ ಚಿನ್ನ ಬೆಳ್ಳಿ ಸಾಗಾಣಿಕೆಯನ್ನು ವಿಶ್ಲೇಷಿಸಬಹುದು. ಭಾರತದಲ್ಲಿ ವರ್ಷಕ್ಕೆ 150 ಟನ್ ಚಿನ್ನ ಬೇಕಾಗಿದ್ದರೂ ಇಲ್ಲಿ ಲಭ್ಯವಿರುವುದು ಅದರ ಅರ್ಧಾಂಶ ಮಾತ್ರ. ಚಿನ್ನದ ಆಮದಿನ ಮೇಲಿನ ನಿಷೇಧ ಮತ್ತು ಕುಸಿಯುತ್ತಿರುವ ರೂಪಾಯಿ ಮೌಲ್ಯ ಎರಡೂ ಚಿನ್ನದ ಕಳ್ಳ ಸಾಗಾಣಿಕೆಗೆ ದಾರಿಮಾಡಿದೆ. ಜತೆಗೆ ಹಣಕ್ಕಾಗಿ ಜೀವಕೊಡಲು ಸಿದ್ಧರಿರುವ ಬಡತನ-ನಿರುದ್ಯೋಗಗಳಿಂದ ನರಳುತ್ತಿರುವ ಯುವಕರ ಹಿಂಡು ಸದಾ ತಯಾರಿದೆ.

ವಿದೇಶದಲ್ಲಿ 1,500 ರೂಪಾಯಿಗೆ ಸಿಗುವ ಹತ್ತು ಗ್ರಾಂ ಚಿನ್ನ ಭಾರತದಲ್ಲಿ ಸರಾಸರಿ 3,000 ರೂಪಾಯಿ ಬೆಲೆ ಬಾಳುತ್ತದೆ.

ಈ ಅಕ್ರಮ ವ್ಯವಹಾರಗಳಿಂದ ಗುಡ್ಡೆ ಹಾಕಿದ ಕಪ್ಪು ಹಣವನ್ನು ಬಿತ್ತಲು ಮುಂಬೈಯಲ್ಲಿ ಒದಗಿ ಬಂದ ಫಲವತ್ತಾದ ಕ್ಷೇತ್ರ–ಕಟ್ಟಡ ನಿರ್ಮಾಣ. ಇಲ್ಲಿಂದ ಪ್ರಾರಂಭ ಮಣ್ಣಿನ ಮೋಹದ ಕತೆ.

ಕಳ್ಳ ಸಾಗಾಣಿಕೆಯ ದಾರಿ ತೋರಿಸಿದ ಮಸ್ತಾನ್ ಛಾಯೆಯೇ ಮುಂದಿನ ಪೀಳಿಗೆಗೆ ಈ ದಾರಿಯನ್ನೂ ತೋರಿದ್ದಾನೆ. ಮುಂಬೈಯ ಖ್ಯಾತ ಸಿನಿಮಾ ಮಂದಿರಗಳಾದ ಮೆಟ್ರೋ, ಅಪ್ಸರಾ, ಶಾಲಿಮಾರ್, ಗಂಗ, ಜಮುನಾ, ಹೋಟೇಲ್‌ಗಳಾದ ಪೋನವ್ ಇಂಟರ್‌ನ್ಯಾಷನಲ್, ಹೊರಿಜಾನ್, ಕ್ಯಾಸರ್ ಪ್ಯಾಲೇಸ್ ಎಲ್ಲದರ ಹಿನ್ನೆಲೆಯಲ್ಲಿ ಭೂಗತ ಜಗತ್ತಿನ ದೊರೆಗಳಿದ್ದಾರೆ.

ಇತ್ತೀಚಿನ ಸರಣಿ ಕೊಲೆಗಳು ಪ್ರಾರಂಭವಾದದ್ದೇ ಈ ಮಣ್ಣಿನ ಮೋಹದಿಂದ. ಕಳೆದ ಜುಲೈನಲ್ಲಿ ಮಲಾಡ್‌ನ ಕೊಳಗೇರಿ ನಿವಾಸಿಗಳು ಕಟ್ಟಡ ನಿರ್ಮಾಪಕರ ಬೆದರಿಕೆಗೆ ಮಣಿಯದೆ ಪ್ರತಿಭಟಿಸಲು ಕ್ರಿಯಾ ಸಮಿತಿ ಕಟ್ಟಿಕೊಂಡರು. ಕೆಲವೇ ದಿನಗಳಲ್ಲಿ ಕ್ರಿಯಾ ಸಮಿತಿಯ ಸದಸ್ಯ 22ರ ಹರೆಯದ ಯುವಕ ನಿರ್ದಯವಾಗಿ ಕೊಲ್ಲಲ್ಪಟ್ಟ. ಈ ಭೂಮಿಯ ವಿವಾದವೇ ರಮಾ ನಾಯ್ಕನನ್ನು ದಾವೂದ್‌ನಿಂದ ದೂರಗೊಳಿಸಿ ಸಾವಿನೆಡೆಗೆ ಕೊಂಡೊಯ್ದಿತ್ತು.

ಪ್ರಧಾನಿ ರಾಜೀವ್ ಗಾಂಧಿಯಿಂದಲೂ ಶಹಬ್ಬಾಸ್‌ಗಿರಿ ಪಡೆದ 'ಕೊಳೆಗೇರಿ ನಿರ್ಮೂಲನಾ' ಕಾರ್ಯಕ್ರಮವನ್ನು ಮುಂಬಯಿಯ ಖ್ಯಾತ ಬಿಲ್ಡರ್‌ಗಳಾದ ಗೋಯೆಂಕ, ಶೈನ್, ರಹೇಜಾ, ಸಹಾರಾ ಕಂಪೆನಿಗಳು ಯಶಸ್ವಿಯಾಗಿ ನಡೆಸುತ್ತಿವೆ. ಕಪ್ಪು ಹಣದ ಪ್ರವಾಹ ಕೊಳೆಗೇರಿಗಳನ್ನು ಕೊಚ್ಚಿಕೊಂಡು ಹೋಗುತ್ತಿದೆ. ಜನರ ಹೆಣಗಳ ಮೇಲೆ ಗಗನಚುಂಬಿ ಕಟ್ಟಡಗಳು ಮೇಲೇಳುತ್ತಿವೆ. ಇದು ಮುಂಬಯಿ ಎಂಬ ವಿಸ್ಮಯ ಮಾಯಾಜಾಲ!

ಮೂರು ವಿಭಿನ್ನ ಕೃತಿಗಳು

ಪುಸ್ತಕ ವಿಮರ್ಶೆ

1. ಸಂಗೊಳ್ಳಿ ರಾಯಣ್ಣ:
ಲೇ: ಒಡೆಯರ್ ಡಿ. ಹೆಗ್ಗಡೆ;
ಮಿಥುನ ಪ್ರಕಾಶನ: ಮಂಗಳ ಗಂಗೋತ್ರಿ
ಮೊದಲ ಮುದ್ರಣ: 1987 ಬೆಲೆ ರೂ. 6-00

ಇದು ಲಾವಣಿಯ ಆಧಾರದಿಂದ ಬರೆದ ಜೀವನ ಕಥನ. ಸಂಗೊಳ್ಳಿ ರಾಯಣ್ಣನ ಜೀವನ ಪರಿಚಯ ಮತ್ತು ಜಾನಪದ ಲಾವಣಿಯಿಂದ ಇತಿಹಾಸವನ್ನು ಕಟ್ಟುವ ಪ್ರಯತ್ನ ಇಲ್ಲಿನ ಉದ್ದೇಶ.

ಲಿಖಿತ ಆಕರವನ್ನು ಬಿಟ್ಟು ಮೌಖಿಕ ಪರಂಪರೆಯ ಆಧಾರದಿಂದ ಇತಿಹಾಸವನ್ನು ರಚಿಸುವುದು ಜಾನಪದ ಮತ್ತು ಚರಿತ್ರೆಯ ಸಂಬಂಧವನ್ನು ನಿಕಟವಾಗಿಸುತ್ತದೆ. ಇತಿಹಾಸವು ಒಂದು ವರ್ಗದ ಒಲವುಗಳ ಅಭಿವ್ಯಕ್ತಿ ಮಾತ್ರವೇ ಆಗಿ ಬಿಡುವ ಅಪಾಯವನ್ನು ತಪ್ಪಿಸುವುದು ಇಲ್ಲಿ ಸಾಧ್ಯ. ಈ ಬಗೆಯ ಇತಿಹಾಸ ರಚನೆಯಿಂದ ಕಾಲ ಮತ್ತು ಘಟನೆಗಳ ಬಗೆಗೆ ಖಚಿತ ನಿಲುವಿಗೆ ಬರುವುದು ಕಷ್ಟವಾದರೂ ಹಲವಾರು ಜನಪರವಾದ ಅಂಶಗಳು ಬೆಳಕಿಗೆ ಬರಲು ಸಾಧ್ಯವಾಗುತ್ತದೆ.

ಈ ಕೃತಿಯಲ್ಲಿ ಸಾಮಾನ್ಯ ಕಳವಾರನಾಗಿದ್ದ ರಾಯಣ್ಣ ದುಷ್ಟನ ಕುಲಕರ್ಣಿಯನ್ನು ಧಿಕ್ಕರಿಸುವುದು, ಬ್ರಿಟಿಷರ ವಿರುದ್ಧ ಯುದ್ಧ ಸಾರುವುದು, ಅವನ ಹೋರಾಟ, ಕೊನೆಗೆ ವಂಚನೆಗೆ ಆತ ಬಲಿಯಾಗುವುದು ಇತ್ಯಾದಿ ವಿವರಗಳಿವೆ. ಆತನ ಕೆಚ್ಚು, ಸಂಘಟನಾ ಶಕ್ತಿಗಳೊಂದಿಗೆ ಮುಂದಿನ ಹೋರಾಟಕ್ಕೆ ಆತನ ಪ್ರೇರಣೆಯನ್ನೂ ಗುರುತಿಸಲಾಗಿದೆ. 1829ರ ಈ ಯುದ್ಧವೇ ಮೊದಲ ಸ್ವಾತಂತ್ರ್ಯ ಸಂಗ್ರಾಮ ಎನ್ನುವ ಅಂಶ ಗಮನಾರ್ಹ. ಭಾವುಕತೆಯಿಂದ ಪಾರಾಗಿ ವಸ್ತು ನಿಷ್ಠೆಯನ್ನು ಉಳಿಸಿಕೊಂಡಿರುವುದು, ಚರಿತ್ರೆ ನಿರ್ಲಕ್ಷಿಸಿದ ರಾಯಣ್ಣನಿಗೆ ಪ್ರಾಮುಖ್ಯ ನೀಡಿರುವುದು ಈ ದೃಷ್ಟಿಗಳಿಂದಲೂ ಕೃತಿ ಪ್ರಸ್ತುತವಾಗುತ್ತದೆ.

2 ಬೆಡಗು ಲೇ:
ಒಡೆಯರ್ ಡಿ. ಹೆಗ್ಗಡೆ, ಮಿಥುನ ಪ್ರಕಾಶನ: ಮಂಗಳ ಗಂಗೋತ್ರಿ,
ಮೊದಲ ಮುದ್ರಣ: 1987 ಬೆಲೆ ರೂ. 7-50

ಇದರಲ್ಲಿ 170 ಚುಟುಕಗಳಿವೆ. ವಸ್ತುವಿಗನುಗುಣವಾಗಿ ಚುಟುಕಗಳನ್ನು ಐದು ಭಾಗಗಳಾಗಿ ಮಾಡಿದ್ದಾರೆ. ಕಿರಾಡಿ ಮಾವ, ರೇಸ್ ಕುದುರೆಯಂತಹ ಕುಂಟತನದ ಚುಟುಕಗಳೊಂದಿಗೆ ಕೆಂಪು ದೀಪ, ದಕ್ಷಿಣ ಆಫ್ರಿಕಾ ಅವಸಾನದಂತಹ ಗಂಭೀರ ಚುಟುಕಗಳೂ ಇವೆ. ಪ್ರೇಮ ಕಾವ್ಯಗಳಿಗಿಂತ, ರಾಜಕೀಯ ವಸ್ತುವಿನ ಮೇಲೆ ಕವಿಗೆ ಹೆಚ್ಚಿನ ಹಿಡಿತವಿದೆ, ಗಿಂಬಳದವನು, ಸರ್ಕಾರಿ ತೋಳಗಳು, ಆದರ-ಹಾದರದಂತಹ ಚುಟುಕಗಳಲ್ಲಿ ಕವಿಯ ಕಾಳಜಿ ಪರಿಣಾಮಕಾರಿಯಾಗಿ ವ್ಯಕ್ತವಾಗಿದೆ. ಭಾಷೆ ಸರಳವಾಗಿದೆ.

ಪ್ರಾಸಕ್ಕಾಗಿ ಸಾಕಷ್ಟು ಕಷ್ಟಪಟ್ಟದ್ದು ಕಂಡುಬರುತ್ತದೆ. ಎಷ್ಟೋ ಧ್ವನಿಶಕ್ತಿ ಇಲ್ಲದ ಚುಟುಕಗಳು ವಾಚ್ಯವಾಗಿವೆ. 'ಬಂಡೋಲದಲ್ಲಿ ಕವಿದ ಕಾರ್ಮುಗಿಲ ಪಂಕ್ತಿ (41-ಹನ್ನು)' ಇಂತಹ ಆಭಾಸಗಳಿವೆ. 'ಬಜೆಟ್ ಪೆಟ್ಟು' ಎರಡು ಬಾರಿ ಅಚ್ಚಾಗಿದೆ. 'ಪರ-ಅಲೆ'ಯಂತಹ ಚುಟುಕಗಳು ಏನನ್ನೂ ಹೇಳುವುದಿಲ್ಲ. ದಿನಕರ ದೇಸಾಯಿಯವರು ಸಮರ್ಥವಾಗಿ ಬಳಸಿಕೊಂಡ ಈ ಕ್ಷೇತ್ರದಲ್ಲಿ ಬೇರೂರುವುದು ಸುಲಭವಲ್ಲ. ಗಂಭೀರ ಆಸಕ್ತಿಯಾಗಿ ತೆಗೆದುಕೊಂಡರೆ ಹೆಗ್ಗಡೆಯವರು ಇನ್ನೂ ಬೆಳೆಯಬಲ್ಲರು.

3 ಜವಾಹರಲಾಲ್ ನೆಹರೂ ಮತ್ತು ಭಾರತೀಯ ಮಹಿಳೆ:
ಲೇ: ಒಡೆಯರ್ ಡಿ. ಹೆಗ್ಗಡೆ
ಮಿಥುನ ಪ್ರಕಾಶನ: ಮಂಗಳ ಗಂಗೋತ್ರಿ ದ. ಕ. 574199 ಮೊದಲ ಮುದ್ರಣ: 1988;
ಬೆಲೆ: ರೂ. 8-00

ಭಾರತೀಯ ಮಹಿಳೆಯನ್ನು ಕುರಿತ ನೆಹರೂ ಚಿಂತನೆಗಳನ್ನು ಇಲ್ಲಿ ಸಂಗ್ರಹಿಸಿ ಕೊಡಲಾಗಿದೆ. ನೆಹರೂ ಅವರು ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಳ್ಳಲು ಮಹಿಳೆಯರನ್ನು ಪ್ರೋತ್ಸಾಹಿಸಿದವರು. ಮಹಿಳಾ ಹಕ್ಕುಗಳನ್ನು ಪ್ರತಿಪಾದಿಸಿದವರು. ಪರಿಪೂರ್ಣ ವ್ಯಕ್ತಿಯಾಗಲು ಮಹಿಳೆಗೆ ಶಿಕ್ಷಣ ಮತ್ತು ಸ್ವಾವಲಂಬನೆ ಅಗತ್ಯ. ವ್ಯಕ್ತಿ ಪರ ಶಿಕ್ಷಣದ ಮೂಲಕ ಇದು ಸಾಧ್ಯ, ಎಂದವರ ನಂಬಿಕೆ. ಪರದಾ ಪದ್ಧತಿಯನ್ನು ಕುರಿತ ನೆಹರೂರವರ ಐತಿಹಾಸಿಕ ವಿಶ್ಲೇಷಣೆ ಇಲ್ಲಿದೆ. ರಾಷ್ಟ್ರಾಭಿವೃದ್ಧಿಯಲ್ಲಿ ಮಹಿಳೆಯ ಪಾತ್ರ ಹಿರಿದೆನ್ನುವುದು ನೆಹರೂ ದೃಷ್ಟಿ. ಪುಸ್ತಕದ ಉತ್ತರಾರ್ಧದಲ್ಲಿ ನೆಹರೂ ದಂಪತಿಗಳ ಸಂಬಂಧದ ವಿವರಗಳಿವೆ. ಪತ್ನಿಯನ್ನು ಕುರಿತ ನೆಹರೂ ಅಭಿಪ್ರಾಯಗಳು ಇಲ್ಲಿವೆ. ಕಮಲಾರವರ ವ್ಯಕ್ತಿತ್ವದ ವಿಚಾರಗಳು, ವಿಜಯಲಕ್ಷ್ಮಿ ಪಂಡಿತ್‌ರೊಡನೆ ಹೋಲಿಕೆ ಅಗತ್ಯವಿರಲಿಲ್ಲವೆನಿಸುತ್ತದೆ.

ಮೂರೂ ಪುಸ್ತಕಗಳ ಮುದ್ರಣ ಅಚ್ಚುಕಟ್ಟಾಗಿದೆ.

—ರಾಧಾಕೃಷ್ಣ ಕಲ್ಚಾರ್

ಶ್ಲಾಘನೀಯ ಲೇಖನ

ಪ್ರಿಯರೆ,

ದಿನಾಂಕ 11 ಡಿಸೆಂಬರ್ 88ರ ವಾರದ ಮುಂಗಾರುವಿನಲ್ಲಿ ಪ್ರಕಟಗೊಂಡ "ಅಸ್ಸಲಾಮು ಅಲೈಕುಂ ಬೆನಜೀರ್" ಲೇಖನವು ಬೆನಜೀರ್ ಭುಟ್ಟೋರವರ ನೈಜ ಜೀವನದ ಸ್ಪಷ್ಟ ಚಿತ್ರಣವನ್ನು ನೀಡಿದೆ. ಧೀರ ಮನೆತನದ ಈ ಕುವರಿ ಇಂದು ಪಾಕಿಸ್ತಾನದ ಪ್ರಧಾನಿ ಪಟ್ಟ ಏರಿದ್ದು ನಿಜಕ್ಕೂ ರಾಜಕೀಯ ರಂಗದಲ್ಲಿ ಹೊಸ ಅಲೆಯನ್ನು ಮೂಡಿಸಿದೆಯಲ್ಲದೇ ಪಾಕಿಸ್ತಾನದ ಜನರು ಸ್ವತಂತ್ರ ಜೀವನ ನಡೆಸಲು ಅವಕಾಶ ಮಾಡಿಕೊಟ್ಟಂತಾಗಿದೆ. ತನ್ನ ತಂದೆಯ ವ್ಯಕ್ತಿತ್ವ ಮತ್ತು ಧೀರತನವನ್ನು ತನ್ನ ಮಗಳಲ್ಲಿ ಕೂಡ ಕಾಣಬಹುದೆಂಬುದರಲ್ಲಿ ಎರಡು ಮಾತಿಲ್ಲ. ಧಾರ್ಮಿಕ, ಸಾಮಾಜಿಕ ಅಂಧತ್ವದಲ್ಲಿ ಬೆಳೆಯುತ್ತಿರುವ ಪಾಕಿಸ್ತಾನದ ಜನತೆಗೆ ಬೆನಜೀರ್‌ರವರ ಆಡಳಿತ ಯಂತ್ರ ಸೂಕ್ತ ವ್ಯವಸ್ಥೆಯನ್ನು ಕಲ್ಪಿಸುವತ್ತ ಹೆಜ್ಜೆ ಹಾಕಲು ಪ್ರಾರಂಭಿಸಿರುವುದು ಶ್ಲಾಘನೀಯ.

— ಪಿ. ಟಿ. ಕೃಷ್ಣಪ್ಪ
ಬಜಪೆ

ಆ ಊರು, ಕೆರೆ, ದೇವರು

(ಎರಡನೆ ಪುಟದಿಂದ)

ಅಲ್ಲಿ ಎಲ್ಲಾ ಜಾತಿಯ ಹೆಂಗಸರೂ ಬಿಸಿಲು ಬೇಗೆಯನ್ನು ಗಣಿಸದೆ ಕೆಲಸ ಮಾಡುವುದು ಸಾಮಾನ್ಯ ದೃಶ್ಯ. ಬೇಸಾಯವಾದ ನಂತರ ವರ್ಷವಿಡೀ ಕೆಲಸವಿರುತ್ತದೆ. ಆದರೆ ಹೆಣ್ಣಿಗೆ ಸಲ್ಲುವಂತಹ ಕೆಲಸಗಳಾದ ಅಕ್ಕಿ ಕೊಡುವುದು, ಅಳೆಗೆ ಒಯ್ಯುವುದು ಅರಿ ಬಾಚುವುದು, ಧಾನ್ಯ ಕೇರುವುದು, ಕಳೆ ಕೀಳುವುದು, ಕೊಳೆ ತೆಗೆಯುವುದು, ಗದ್ದೆಯನ್ನು ಚೊಕ್ಕ ಮಾಡುವುದು, ಗೊಬ್ಬರಕ್ಕೆ ಸೊಪ್ಪು ತರುವುದು. ಕೊನೆಗೆ ಭತ್ತದ ಹೊರೆಯನ್ನೋ, ಸೊಪ್ಪಿನ ಹೊರೆಯನ್ನೋ ತರುವ [illegible] ಕೆಲಸ ಮಾಡಿದರೆ ಸ್ವಯಂ 'ಏಪ್ ಕಸ್ಸು ಸೂರ್' ಎಂಬ ಹೆಸರನ್ನು ಗಿಟ್ಟಿಸಿಕೊಂಡು ಸಂಭ್ರಮಿಸುತ್ತಾಳೆ. ಆದರೆ ನೇಗಿಲು ಹಿಡಿಯುವುದನ್ನೋ, [illegible] ಗಾಡಿ ಹೊಡೆಯುವುದನ್ನೋ ಆಕೆ ಮಾಡುವುದಿಲ್ಲ. ಮುಂದಿಯೂ ಸೂಸುವುದಿಲ್ಲ. ಅಂಥದ್ದರಲ್ಲಿ ಸಾವಿತ್ರಿ ನೇಗಿಲನ್ನು ಹಿಡಿದ ಹೆತ್ತಳು?.

ಮೊನ್ನಿನ 10—13 ವರ್ಷಗಳಿಂದ ಹಿರಿಯವರ ಸಾವಿತ್ರಿಯನ್ನು ನಾನು ಬಾಲ್ಯದಿಂದಲೂ ಕಂಡಿದ್ದ. ಅವಳಿಗೆ ಅಂದಾಗಿದ್ದ ಬೆಳ್ಳಗಿನ ಬಣ್ಣದ ಚಂದದ ಮೈ [illegible]. ಆದರೆ ಈಗ ಅವಳ ಚಿತ್ರವನ್ನು ಕಲ್ಪಿಸಿಕೊಳ್ಳುವಲ್ಲಿ [illegible]. B A ಯಲ್ಲಿ ಸಾಹಿತ್ಯದ ವಿದ್ಯಾರ್ಥಿಯಾಗಿದ್ದು [illegible] ಎಂದು ಕಸ್ತೂರಿಗಳ ಮತ್ತು ಬಿಸಿಲನ್ನು ಲೆಕ್ಕಿಸದೇ [illegible] ಸುಮ್ಮನೇ [illegible] ಆಕಾಶಕ್ಕೆ ಕೈಯೆತ್ತಿ [illegible]. ಅಂತೂ ಸಾವಿತ್ರಿಯ ಸಾವಿತ್ರಿ ಕಾಣಲಿಲ್ಲ. ಅದರಾಚೆಗೆ? [illegible] ಉತ್ತರ ಹೇಳುವುದು [illegible].

ಈ ಘಟನೆ ನಡೆದು ಹದಿನೈದು ದಿನಗಳಾಗಿಲ್ಲ, ಸಾವಿತ್ರಿ ಒಂದು ದಿನ ಮನೆಗೆ ಬಂದಿದ್ದಳು. [illegible] ಸಾವಿತ್ರಿಯನ್ನು [illegible] ಮನೆಯತ್ತ ಹಾಕಿಕೊಂಡಿದ್ದಳು.

ಅಮ್ಮ ಸಾವಿತ್ರಿಯನ್ನು ಉದ್ದೇಶಿಸಿ ಮಾತಾಡುತ್ತಿದ್ದಳು.

"ಹೆಣ್ಣ್ ಹೀಗ್ ಇನ್ನೆಂತ ಕೆರೆ ಹಾರಿಕ್ಕೊ ದೇವ್ರೇ! ಬಲ್ಲ. ಪರ್ ಮೂಕ್ಷ್ಯದ್ ಕಳೆದ್ರು ಬುದ್ದಿ ಇಲ್ಲ. ಇನ್ನೂ ಮದಿ ಆಯಲ್ಲ ಜೀವ್. ಇಷ್ಟಾರೂ ಗಂಡ್ ಸಿಕ್ಕಿಲ್ಲದಿಲ್ಲೇ ಅಂದ್ ಹೇಂಗೆ? ಹೇಳಾದ್ ಒಂದ್ನೇಕೆ ಸಿಕ್ಕಿದ್ರೆ ಹೋಗಿಲ್ಲ ಕುಣೆಯುವುದಾ? ಇಂಥಾ ಹವಿಸ್ಕೇಡಿದ ಯಾವಾರ ಮಾಡ್ತೇವ್ವಾ? ಊರಿಡೀ ಹೇಳ್ಯಾಂಡ್ ನಗಾಡತ್ತಲೇ ನನಗಿಂತೂ ಸ್ವಾಡ ಅನ್ನಿಸಿತು. ಮಾದುತ್ತ ಅಯ್"

ಪಕ್ಕಕೆ ಸಾವಿತ್ರಿಯದೇ ಇಂದೇಕು. ಗಳಗೆ ಕಳೆದ ನಂತರ ಅವಳ ಸ್ವರವೇ ಕೇಳಿಸಿತು. "ಇನ್ನೇನ್ ಮಾಡೋದ್? ನೂರೊಂದ್ ದೇವ್ರಿಗ್ ಹರ್ಕೆ ಹೊತ್ಕೊಂಡಾಯ್ತು. ಯಾರೋ ಹೇಳಿದ್ರು, ಅಂತ್ಲೇಳ ಮೊನ್ನೆ ಅಮಾಸಿದಿನ್ನ ಕಗ್ಗತ್ತಲ್ ಆ ಕೆರೆಗ್ ದುಂಡಾಗ್ ಸುತ್ ಬಂದೆ. ಇನ್ನೇನ್ ಮಾಡೋದ್ ಹೇಳ್. ಕಷ್ಟ ಅಪ್ಪ ಅಪ್ಪೆಗ್ ಜಾತಕದಲ್ಲಿ ಅಂದಾಯ್ತು. ಇಪ್ಪತ್ತ್ ವರ್ಷಕ್ಕೆ ಹಿಡ್ದ ಹೊಡಿಸವು ರಡೆ. ಹೊದ್ ಮಾಡಿದೆ. ಗಂಡ್ ಮಾಡೂ ಕೆಲ್ಸ ಎಲ್ಲ ಮಾಡ್ದೆ. ಅಪ್ಪ ಅಪ್ಪೆಗ್ ಆಸ್ಕ್ಯೇ ಆಯ್ತು. ಈಗ ಊರವ್ರಿಗ್ ಯಾರಿಗಾರೂ ಸಂಕ್ಟ ಆಯ್ತಾ? ಈಗ ನಿನ್ ಆಸಿಯ್ ಇಲ್ಲ. ಒದ್ದಾಡೀಕೆ ಊರವ್ರ ಮುಖ್ಯದಿ ಗೊಂಡಿ ಹಾದ್ರಿ ಹೇಯ್ತಾ? ಊರವ್ರ ಬಾಯಲ್ ಹಲ್ಲಿಲ್ಲೆ ಹೊಂಗಾಯ್ ಸಾಲಿಗೆ ಹ್ಯಾಂಗ್ ದೇವಾದರೂ ತೀರ್ಗತ್. ಹಂಗುತಿತ್ ಅಪ್ಪ ಅಪ್ಪೆ ಹತ್ರ ತೋಲ ದುಡ್ಡಿದ್ದಿದ್ರೆ ದೊಡ್ಡಂಟಾಗೂ 40—50 ಸಾವ್ರ ಖರ್ಚ್ ಮಾಡ್ತಂಗ್ ಇದ್ದಿದ್ರೆ ದೇವ್ರ ಬೇಡ ದಿಂಡೂ, ಬೇಡ. ಇಪ್ಪತ್ತ್ನ್ ದ್ ಶಾಸ್ತ್ರ ಮಾಡ್ತಿದ್ದ್ ಇದನ್ನೊ ಮಾಡ್ದೆ"

ಸಾವು ಕುಳಿತಲ್ಲಿಯೇ ಮರಗಟ್ಟಿದೆ. "ಇದೆಂಥ ಶಾಸ್ತ್ರವಪ್ಪ?" ಎಂದು "ಅಪ್ಪನ ಮನೆ ಸ್ಥಿರವಲ್ಲ ಎಂದು ಬಾಲ್ಯದಿಂದಲೇ ಮನಸ್ಸಿಗೆ ತುಂಬಿಸಿ ಬೆಳೆಸಿದ ಹೆಣ್ಣಿಗೆ, ಅವಿವಾಹಿತಳಾಗಿದ್ದು ಮುಂದಿನ ಕಾರುಗಳನ್ನು ಕಳೆದ ನಂತರ ಆಕೆಗೆ ಮಾಡುವ ಇನ್ನೊಂದು ಅವಮಾನವಿದು?"

"ಹಾಗಾದರೆ ಅಂದು ಊರಿಡೀ ತುಂಬಿದ ಸುದ್ದಿಗೂ ಇವಳಿಗೂ ಸಂಬಂಧದ ಗತಿರೇಖೆ ಇದೆ. ಇದು ಸತ್ಯವಾದಂತೆ ಅದೂ ಸತ್ಯವಾಗಿದ್ದಿರಬಹುದು... ಈ ಆಚಾರಗಳಲ್ಲಿ ಹೆಣ್ಣಿನ ಬಗ್ಗೆ ಯಾವುದೇ ಅನುಕಂಪವೂ ಗೋಚರಗೊಳ್ಳಲಿಲ್ಲ..."

ಯೋಚಿಸುತ್ತಾ ಹೋದಂತೆ ಆ ಗಳಗೆಯ ಸಾವಿತ್ರಿಯ ಎದೆಯಲ್ಲಿದ್ದ ಭಾವನೆಗಳ ಆಳವನ್ನು ಗ್ರಹಿಸಲು ಸಾಧ್ಯವಾಗದೇ ಬಿಟ್ಟಿದೆ.

"ಈ ಊರಿನ ಹೆಣ್ಣು ಮಕ್ಕಳು ಈ ದಾರಿಗೆ ಬಂದರು?" ಎಂಬ ವೇದನೆಯ ಪ್ರಶ್ನೆಯೊಂದು ನನ್ನಲ್ಲಿ ಹುಟ್ಟಿತು.

ಅಮ್ಮ ಅಬ್ಬರದಲ್ಲಿಯೇ ಹೇಳಿದಳು. 'ಅಲ್ಲ ಹೆಣ್ಣೇ, ಹಾಂಗಂತ್ಲೇ ಈ ಮರ್ಲ್ ಕೆಲ್ಸ ಮಾಡೋದಾ? ರಾಘವೇಂದ್ರ ಸ್ವಾಮಿಯ ಗುರುವಾರ ಒಪ್ಪತ್ ಹಿಡ್ಕೊ. ಮದಿ ಆಯ್ತಿ ಏನಾತ್? ಅಯೇ ಅತ್ ಎಪ್ಪ್ ಹಣ್ ಮಕ್ಕಗ್ ಆಯಿತ್ ನಿಂಗಾತಿಲ್ಲೆ ಅಂದ್ರೆ ಏನ್? ಕಾಂಚೊ." "ಅಮ್ಮ ತೋರಿದ್ದು ಇಪ್ಪತ್ತೇಳನೆಯ ದಾರಿ" ಎಂದು ನನ್ನಷ್ಟಕ್ಕೇ ಲೆಕ್ಕ ಹಾಕಿದೆ.

ತಗ್ಗಿದ ದನಿಯಲ್ಲಿ ಸಾವಿತ್ರಿ "ಅಲ್ಲ ಸುಶೀಲಕ್ಕಾ ನೀ ಹೇಳ್ದೆ ಇಷ್ಟ್ ಸಮ್ಮ ಕೂತ್ಕಂಡೆ. ಬೆನ್ನಿಗ್ ಬಿದ್ದವ್ರಿಗಾರೂ ಒಂದು ದಾರಿ ಆಯ್ತಲ್ಲ. ಪನ್ನಿಂದಾಯ್ ಅಪ್ಪ ನಾಳೆ ಕೋಳಿಯೂ ಕಾಗ್ದಲು. ಏನ್ ಮಾಡೋದ್ ಕಲ್ಲೇಗೂ ಕಣ್ಣಿತ್ ಅಂದ್ ಈಗ ಗೊತ್ತಾಯ್ತ್" ಎಂದಿದ್ದಳು.

ಗಳಗೆ ಬಿಟ್ಟು ಸಾವಿತ್ರಿಯೇ ಹೇಳುತ್ತಿದ್ದಳು, "ಏನೋ ಭವಿಷ್ಯದ ಆಸೀಂದ್ ಹೋದೆ... ಹಿಂದೆ ಬರತ್ತಿನಲಿಲ್ಲ್ಯೋ ಏನೋ... ಮನಸ್ಸಿಗೆ ಏನೋ ಕಂಡಿತ್... ಬದಕೂ ಆಸಿಯಂದ್ ಬಂದೆ. ಇನ್ ಇಂತ ವ್ಯಾಪಾರ ಕೈ ಹಾಕೋದಿಲ್ಲೆ. ನಿನ್ನತ್ರ ಅಲ್ಲ ಇಷ್ಟ್ಯಾರತ್ರ ಹೇಳ್ಲೆ."

ಇದಿಕ್ಕೂ ಏರಿ ಸಾವಿತ್ರಿಯಲ್ಲಿ ಭಾಷೆ ಇರಲಿಲ್ಲ. ಅಮ್ಮನ ಅವಳ ಮಾತುಗಳು ಅವಳಿಗೂ ಊರಿಗೂ ನಡೆದ ಸಂವಾದದಂತೆ ಇದ್ದವು. ವ್ಯತ್ಯಾಸವೆಂದರೆ ಊರು ಅವಳ ಮನಸ್ಸನ್ನು ಕಾಣದು. ಅವಳು ಕಂಡಳು. ಅಲ್ಲಿ ಹೆಪ್ಪುಗಟ್ಟಿದ್ದ ದುಗುಡಗಳು, ದ್ವಂದ್ವಗಳ ಮೌನವಾಗಿ ಅವಳನ್ನು ಮುಟ್ಟಿರಬೇಕು. ಇಬ್ಬರ ನಡುವೆ ನೀರವತೆ ನೆರೆಗೊಂಡಿತ್ತು.

ಸಂಜೆ ಕೆರೆಯ ಸಮೀಪ ಹೋಗುವ ಮನಸ್ಸಾಯ್ತು. ಕೆರೆಯನ್ನು ನೋಡುತ್ತಿದ್ದ ನನಗೆ ಸಾವಿತ್ರಿಯು ಪ್ರತ್ಯಕ್ಷವಾಗಿ ಕಾಡುತ್ತಿದ್ದಳು. ಕಣ್ಣು ಕೆರೆಯನ್ನು ಕಾಣುತ್ತಿತ್ತು. ಯಾವುದೂ ನನ್ನಲ್ಲಿ ಗುತ್ತಿಗೆಯಾಗಿ ಉತ್ತರವಿರಲಿಲ್ಲ.

ಅಂತೂ ಕೆಸರನ್ನು ಕಳೆದು ತಿಳಿ ನೀರನ್ನು ಹೊಂದುವವರೆಗೆ ಒಂದು ತರಹ ಕತೆಗಳ ರಾಶಿಗಳು ಆ ಊರಲ್ಲಿ ಇದ್ದವು. ನೀರು ತಿಳಿಯಾದ ನಂತರವೂ ಕತೆಗಳ ಸಾಲು ಹುಟ್ಟಲೆನ್ನು ಆ ಕೆರೆ ಹೊಂದಿದೆ.

"ಇದಿ ಊರು ಕಗ್ಗತ್ತಲೆಯಲ್ಲಿ ಕಪ್ಪುಗಟ್ಟಿದ್ದಾಗ ಈ ಕೆರೆ ಎಷ್ಟು ಒಂಟಿ ಮನಸ್ಸುಗಳನ್ನು ಬೆಚ್ಚಿಸಿ ಗೊಳಿಸಿದೆಯೋ, ಹತ್ತಿರದಲ್ಲಿಯೇ ಇದ್ದ ಊರ ಬಾಯಿಯ ಅಷ್ಟ ಕೊಳ್ಳೇಶ್ವರನಿಗೇ ಆಗಲೀ, ಅಮ್ಮ ತಂತಿರುವ ಅಪ್ಪುವಿನರಿಗೇ ಆಗಲಿ ಅದು ಇದ್ದದ್ದೂ ಗೊತ್ತಾಗುತ್ತಿರಲಿಲ್ಲವೋ ಏನೋ!!!!"

ಮಂಗಳೂರಿನಲ್ಲಿ ಕಳೆದ ಶನಿವಾರ 'ಮಂಗಳ ಜ್ಯೋತಿ' ಅಂಗವಿಕಲರ ಕಲ್ಯಾಣ ಸಂಸ್ಥೆ ಆಶ್ರಯದಲ್ಲಿ ನಡೆದ ರಸಮಂಜರಿಯ ವಿಭಿನ್ನ ದೃಶ್ಯಗಳು. 1. ಜಯಪ್ರದಾ ಗಂಡ ಶ್ರೀಕಾಂತ ನಹಾತಾ ಜತೆ. 2. ಹೊಸ ಪೀಳಿಗೆಯ ಸ್ಟಾರ್ ಶಿವರಾಜ್ — ವಿನೋದ್ ಆಳ್ವ ಚರ್ಚೆ. (ಕೆಳಗೆ) ಹಾಡುತ್ತಿರುವ ಕಲಾವಿದರು - ವಿಷ್ಣುವರ್ಧನ್, ಕಲ್ಯಾಣ್ ಕುಮಾರ್, ಜಯಪ್ರದಾ, ಅಂಬರೀಶ್, ಶಂಕರನಾಗ್. ಚಿತ್ರ : ಕೇಶವ ವಿಟ್ಲ

ಹಿಂದಿ ಚಿತ್ರರಂಗದ ಹೊಸ ಚೆಲುವ
ಅಮೀರ್ ಖಾನ್

ಇತ್ತೀಚಿನ ಕೆಲವು ವರ್ಷಗಳಲ್ಲಿ ಹಿಂದಿ ಚಿತ್ರರಂಗದಲ್ಲಿ ಯುವ ನಾಯಕರ ಪ್ರವೇಶ ಹೆಚ್ಚಿದೆ. ಸನ್ನಿ ಡಿಯೋಲ್, ರಾಜೀವ್ ಕಪೂರ್, ಮೋಹ್ನಿಶ್ ಬೆಹ್ಲ, ಕುಣಾಲ್ ಗೋಸ್ವಾಮಿ ಈ ನಾಲ್ಕು ತಾರಾಪುತ್ರರು ದಾಳಿಯನ್ನು ಆರಂಭಿಸಿದರೆ ಅದನ್ನು ಮುಂದುವರಿಸಿದವರು ಗೋವಿಂದ, ಚಂಕಿ ಪಾಂಡೆ, ಸುಮೀತ್ ಸೈಗಲ್ ಹಾಗೂ ರೋಹನ್ ಕಪೂರ್.

ಅವರ ನಂತರ ಇದೀಗ ನಾಯಕ ಪಟ್ಟಿಗಳಿಗೆ ಹೊಸದಾಗಿ ಲಗ್ಗೆ ಇಟ್ಟಿರುವವರು ಅಮೀರ್‌ಖಾನ್, ಅಜಿತ್‌ವಾಲ್, ಆದಿತ್ಯ ಪಾಂಚೋಲಿ ಹಾಗೂ ಅಭಿನವ್ ಚತುರ್ವೇದಿ. ಈ ನಾಲ್ವರಲ್ಲಿ ಸಿನೆಮಾ ಮೂಲದವನೆಂದರೆ ಅಮೀರ್‌ಖಾನ್. ಈತ ಹಿಂದಿ ಚಿತ್ರರಂಗದ ಖ್ಯಾತನಾಮರಾದ ನಾಸಿರ್ ಹುಸೇನರ ಸೋದರಳಿಯ. ತನ್ನ ಪ್ರಥಮ ಚಿತ್ರ 'ಖಯಾಮತ್‌ಸೇ ಖಯಾಮತ್‌ತಕ್'ನಲ್ಲಿ ಭರ್ಜರಿ ಆರಂಭ ನೀಡಿರುವ ಈತ ಸದ್ಯದ ಯುವಜನಾಂಗದ ಹೊಸ ಹೀರೋ ಆಗಿ ಯಾವುದೇ ತಕರಾರಿಲ್ಲದೆ ಒಪ್ಪಿಗೆಯಾಗಿದ್ದಾರೆ.

ಹೊಸಪೀಳಿಗೆಯ ಈ ಹತ್ತು, ಹನ್ನೆರಡು ಹುಡುಗರು ಸುಮಾರು ಒಂದೇ ಕಾಲದಲ್ಲಿ ಬೆಳ್ಳಿತೆರೆಗೆ ಧಾಳಿಯಿಟ್ಟಿರುವುದರಿಂದ ಪ್ರತಿಯೊಬ್ಬನನ್ನೂ ಗುರುತಿಸಿ ಹೆಸರನ್ನು ನೆನಪಿಸಿಕೊಳ್ಳುವುದು ಅಷ್ಟೇನೂ ಸುಲಭದ ಕೆಲಸವಲ್ಲ. ಆದರೂ ಇವರಲ್ಲಿ ಕೆಲವರು ಹೆಚ್ಚು ಚಿತ್ರಗಳಲ್ಲಿ ಕಾಣಿಸಿಕೊಂಡಿದ್ದರ ಕಾರಣ ಚಿತ್ರಪ್ರೇಮಿಗಳಿಗೆ ಸ್ವಲ್ಪ ಮಟ್ಟಿಗೆ ಪರಿಚಿತರಾಗಿರಬಹುದು.

ಹಿಂದಿ ಚಿತ್ರರಂಗದ ದೊಡ್ಡ ಹೆಸರಾಗಿರುವ ರಾಜೇಂದ್ರ ಕುಮಾರ್ ತನ್ನ ಪುತ್ರ ಕುಮಾರ್ ಗೌರವ್‌ನ ತಾರಾ ಭವಿಷ್ಯಕ್ಕಾಗಿ ಬಹಳಷ್ಟು ಶ್ರಮಿಸಿದ್ದಾರೆ. ಆತನಿಗಾಗಿಯೇ ಹಲವಾರು ಚಿತ್ರಗಳನ್ನೂ ನಿರ್ಮಿಸಿದ್ದಾರೆ. ಈ ಕುಮಾರ್ ಸರ್ವಾಂಗ ಸುಂದರನಾಗಿದ್ದರೂ ಅಭಿನಯದಲ್ಲಿ ನಿರೀಕ್ಷಿತ ಮಟ್ಟ ಮುಟ್ಟದ ಕಾರಣ ಇನ್ನೂ ಚಿತ್ರರಂಗದಲ್ಲಿ ಭದ್ರವಾಗಿಲ್ಲ.

ಆದರೆ ಕನಸುಗಣ್ಣಿನ ಈ ಅಮೀರ್ ಖಾನನು ತನ್ನ ಮನೋಜ್ಞ ಅಭಿನಯದಿಂದ ಯುವ ಪ್ರೇಮಿಗಳ ಮನಸ್ಸನ್ನು ಸೂರೆಗೊಂಡಿದ್ದಾನೆ. ಒಂದು ಮಧುರ ಪ್ರೇಮ ಕಾವ್ಯದಂತಿರುವ ಈ ಚಿತ್ರದಲ್ಲಿ ಪೂರ್ಣವಾಗಿ ತನ್ನನ್ನು ತೊಡಗಿಸಿಕೊಂಡಿರುವ ಈತ ಅನೇಕ ನಿರ್ಮಾಪಕರನ್ನೂ ತನ್ನತ್ತ ಸೆಳೆದಿದ್ದಾನೆ. ಈ ವಿಷಯವೇತ ಅಮೀರ್‌ಖಾನ್ ಭವಿಷ್ಯದ ಬಗ್ಗೆ ಸುಂದರ ಕನಸುಗಳನ್ನು ಕಂಡಿದ್ದರೂ ಕೈಗೆ ಸಿಕ್ಕಿದ್ದನ್ನೆಲ್ಲಾ ಬಾಚಿಕೊಳ್ಳುವ ಪ್ರವೃತ್ತಿಯನ್ನು ತೋರಿಲ್ಲ. ಈತ ಹಿಂದಿಚಿತ್ರರಂಗದ ಅತಿ ದೊಡ್ಡ ಕುಳಗಳಾದ ರಮೇಶ್ ಸಿಪ್ಪಿ, ರಾಹುಲ್ ರವೈಲ್‌ರ ಆಹ್ವಾನವನ್ನು ನಿರಾಕರಿಸಿದ್ದಾನೆ. ಅದಕ್ಕೆ ಈತ ನೀಡುವ ಸಮಜಾಯಿಷಿಯೆಂದರೆ 'ಸದ್ಯಕ್ಕೆ ದೊಡ್ಡವರ ಸಹವಾಸ ಬೇಡ' ಅಂತ.

ಕನ್ನಡದ 'ಪ್ರೇಮಲೋಕ'ದಲ್ಲಿ ಜೂಲಿಯಾಗಿದ್ದಾಕೆ ಈಗ ಖಯಾಮತ್ ಸೇ ಖಯಾಮತ್ ತಕ್‌ನಲ್ಲಿ ಅಮೀರ್‌ಖಾನ್ ಜೊತೆಯಲ್ಲಿ ಮತ್ತೆ ಜೂಹಿಚಾವ್ಲಾಳಾಗಿ ವಿಜೃಂಭಿಸಿದ್ದಾಳೆ. ಜೂಲಿ ಹೀರೋಯಿನ್ ಆಗುವುದಾದರೆ ಅಮೀರ್‌ಖಾನ್‌ಗಿಂತ ಚೆಂದವಾಗಿ ನಾವು ಅಭಿನಯಿಸುತ್ತೇವೆ ಎಂದು ಗಾಂಧಿನಗರದ ಕೆಲವು ಪಡ್ಡೆ ಹುಡುಗರು ಗೊಣಗಾಡುತ್ತಿದ್ದಾರಂತೆ. ಅದನ್ನು ಅಲ್ಲಗಳೆಯಲಾಗುವುದಿಲ್ಲ. ಯಾಕೆಂದರೆ ಇವರಲ್ಲಿ ಯಾವನು ರವಿಚಂದ್ರನ್‌ನಂತೆ ಧುತ್ತನೆ ಎದ್ದು ಬರುತ್ತಾನೋ

ನಮ್ಮ ಹೊಸ ಪೀಳಿಗೆಯ ಯುವ ನಾಯಕರಲ್ಲಿ ಅಮೀರ್‌ಖಾನ್ ಅನೇಕ ರೀತಿಯಲ್ಲಿ ಭಿನ್ನವಾಗಿದ್ದಾನೆ. ಈತ ಸಿಕ್ಕಿದ ಹುಡುಗಿಯರ ಬೆನ್ನು ಹತ್ತುವುದಿಲ್ಲ. ಮದ್ಯಪಾನ ಮಾಡುವುದಿಲ್ಲ. ಧೂಮಪಾನವನ್ನು ಎಷ್ಟೊಂದು ವಿರೋಧಿಸುತ್ತಾನೆಂದರೆ ತನ್ನ ಮಿತ್ರರು ಸಿಗರೇಟು ಸೇದುವುದನ್ನು ಈತ ಮೆಚ್ಚುವುದಿಲ್ಲ. ಸೆಕ್ಸ್ ಬಗ್ಗೆ ಹರಟೆಕೊಚ್ಚುವುದಿಲ್ಲ.

ಛೇ ಎಷ್ಟೊಂದು ಒಳ್ಳೆಯ ಹುಡುಗ ನಮ್ಮ ಹೀರೋ ಎಂದು ಈತನನ್ನು ಪ್ರೀತಿಸಲು ಹೊರಡಬೇಡಿ ಹುಡುಗಿಯರೇ, ಈತ ಈಗಾಗಲೇ ಒಬ್ಬಳನ್ನು ಪ್ರೇಮಿಸುತ್ತಿದ್ದಾನೆ ಮತ್ತು ಆಕೆಯನ್ನೇ ವರಿಸುತ್ತಾನಂತೆ ಕೂಡಾ.

ಇಷ್ಟು ಚಿಕ್ಕ ವಯಸ್ಸಿನಲ್ಲಿ ಅಮೀರ್ ಬಹಳಷ್ಟು ತಿಳಿದುಕೊಂಡಿದ್ದಾನೆ. ಮನಶ್ಶಾಂತಿಯಿಲ್ಲದ ಸಂಪತ್ತಿನಲ್ಲಿ ಈತನಿಗೆ ಆಸಕ್ತಿಯಿಲ್ಲ. ಹಾಗಾಗಿ ಹಣದ ಬೆನ್ನು ಹತ್ತುವುದರ ಬದಲು ತನ್ನ ಹಾದಿಯಲ್ಲಿ ಬರುವ ಯಶಸ್ಸಿನಲ್ಲಿ ತೃಪ್ತಿ ಕಾಣುತ್ತಾನೆ. ತೀರಾ ಸರಳ ಕಾಟನ್ ಉಡುಪುಗಳನ್ನು ಅತಿಯಾಗಿ ಮೆಚ್ಚುವ ಈ ಸರಳ ಸ್ವಭಾವದ ಹುಡುಗನಿಗೆ ತನ್ನ ಸಂಪಾದನೆಯಲ್ಲಿ ಮಾರುತಿ ಕಾರನ್ನು ಕೊಳ್ಳಬೇಕೆನ್ನುವಾಸೆ.

—ರವೀಂದ್ರ ಪೈ

ಬಣ್ಣದ ತೋಟದ ಮಲ್ಲಿಗೆ

ನಟಿಯೊಬ್ಬಳ ಒಂದು ಚಿತ್ರ ಯಶಸ್ವಿಯಾದರೆ, ಆಕೆಗೆ ಅವಕಾಶಗಳ ಮಹಾಪೂರವೇ ಹರಿಯುತ್ತದೆ. ಹಾಗೆಯೇ ಒಂದು ಚಿತ್ರ ಗೋತಾ ಹೊಡೆದರೆ ಆಕೆಯನ್ನು ಕೇಳುವವರೇ ಇಲ್ಲ. 1984ರ 'ಮಿಸ್ ಇಂಡಿಯಾ' ಜೂಹಿಚಾವ್ಲಾಳ ಕತೆಯೂ ಹೀಗೆ. ಆಕೆ ನಟಿಸಿದ ಮೊದಲ ಚಿತ್ರ 'ಸಲ್ತನತ್' ನಟ ಶಶಿಕಪೂರ್‌ನ ಮಗ ಕರಣ್ ಕಪೂರ್‌ನ ಜೋಡಿಯಾಗಿ ಕಾಣಿಸಿಕೊಂಡ 'ಸಲ್ತನತ್' ಚಿತ್ರ ಫ್ಲಾಪ್ ಆಯಿತು. ಜೂಹಿ ಅವಕಾಶಗಳಿಗಾಗಿ ಪರದಾಡಿದ್ದೆ ಪರದಾಡಿದ್ದು. ನಂತರ ಉತ್ತರದಲ್ಲಿ ಸಿಗದ ಯಶಸ್ಸಿಗಾಗಿ ದಕ್ಷಿಣಕ್ಕೆ ಬಂದಳು. ಯಾವಾಗಲೂ ಮುಂಬೈ ಜೆಪಗಿಯತ್ತ ಒಂದು ದೃಷ್ಟಿ ಹರಿಸಿಕೊಂಡಿದ್ದ ನಟ, ರವಿಚಂದ್ರನ್‌ರ ಮೊದಲ ನಿರ್ದೇಶನದ 'ಪ್ರೇಮಲೋಕ' ಚಿತ್ರದ ನಾಯಕಿಯಾಗಿ, ಜೂಹಿ, ಜೂಲಿಯಾಗಿ ಕಾಣಿಸಿಕೊಂಡಳು. ಈ ಚಿತ್ರ ಆ ವರ್ಷದ ಬಂಪರ್ ಹೊಡೆದ ಚಿತ್ರವಾಯಿತು. ಪಡ್ಡೆ ಹುಡುಗರ ಕನಸಿನಲ್ಲೂ ಕಾಡುವ ಹುಡುಗಿಯಾಗಿ ಜೂಲಿ ಯಶಸ್ಸನ್ನು ಪಡೆದಳು.

ದಕ್ಷಿಣದಲ್ಲಿ ಸಿಕ್ಕಿದ ಯಶಸ್ಸನ್ನು ಈಕೆ ಉತ್ತರದಲ್ಲಿ ನಿರೀಕ್ಷಿಸುತ್ತಿದ್ದಳು. ಆಗ ನಾಸಿರ್ ಹುಸೇನ್ ಅವರ 'ಖಯಾಮತ್ ಸೆ ಖಯಾಮತ್ ತಕ್' ಚಿತ್ರದ ಅಮೀರ್ ಖಾನ್‌ನ ಜೋಡಿಯಾಗಿ ಜೂಹಿ ಅವಕಾಶ ಗಿಟ್ಟಿಸಿದಳು. ಮಾಮೂಲಿ ದಿಶುಂ ದಿಶುಂ ಚಿತ್ರಗಳ ನಡುವೆ, ಯುವ ಪ್ರೇಮಿಗಳ ಕಥಾನಕ ಇರುವ ಈ ಚಿತ್ರ 'ಹಿಟ್' ಆದದ್ದೇ ತಡ, ಜೂಹಿಗೆ ಬೇಡಿಕೆಗಳು ಅಧಿಕವಾದವು. ಈಗ ಜೂಹಿಗೆ ಹಿಂದಿ ಚಿತ್ರರಂಗದಲ್ಲಿ ಅಧಿಕ ಬೇಡಿಕೆ ಇದೆ.

ರವಿಚಂದ್ರನ್ ಅವರ 'ಪ್ರೇಮಲೋಕ'ದಲ್ಲಿ ವಿಹರಿಸಿದ ಜೂಲಿ, 'ರಣಧೀರ'ದಲ್ಲಿ [illegible] ಕಾಣಿಸಿಕೊಂಡಳು. ರವಿಚಂದ್ರನ್‌ರ ಮುಂದಿನ, ನಾಲ್ಕು ಭಾಷೆಗಳಲ್ಲಿ ನಿರ್ಮಿತವಾಗುತ್ತಿರುವ 'ಶಾಂತಿಕ್ರಾಂತಿ'ಯ ನಾಯಕಿ ಜೂಹಿ ರವಿಚಂದ್ರನ್, ರಜನೀಕಾಂತ್, ನಾಗಾರ್ಜುನ್‌ರೊಂದಿಗೆ ಈಕೆ ಕುಣಿಯಲಿದ್ದಾಳೆ.

ಅಮೀರ್‌ಖಾನ್— ಜೂಹಿಚಾವ್ಲಾ ಅವರ ಜೋಡಿಗೆ ಈಗ ಹಿಂದಿ ಚಿತ್ರರಂಗದಲ್ಲಿ ಬೇಡಿಕೆ ಇದೆ. ಬಿ. ಸುಭಾಷ್ ಅವರ 'ಲವ್ ಲವ್ ಲವ್' ಚಿತ್ರದಲ್ಲಿ ಪುನಃ ಈ ಜೋಡಿ ಒಟ್ಟಾಗಿ ಅಭಿನಯಿಸಲಿದ್ದಾರೆ. ದೊಡ್ಡ ದೊಡ್ಡ ಬ್ಯಾನರಿನ ಚಿತ್ರಗಳಿಗೆ ಜೂಹಿ ಆಯ್ಕೆಯಾಗುತ್ತಿದ್ದಾಳೆ. ಹಿಂದೊಮ್ಮೆ ಅವಕಾಶಗಳಿಗಾಗಿ ಪರದಾಡಿಕೊಂಡಿದ್ದ ಜೂಹಿಯ ಮನೆ ಮುಂದೆ ಈಗ ನಿರ್ಮಾಪಕರ ದಂಡೇ ಕ್ಯೂ ನಿಂತಿದೆ. ಹಿಂದಿಯ ಹೆಚ್ಚಿನ ನಟರೂ ಈಕೆಯೊಂದಿಗೆ ನಟಿಸಲು ಕಾತುರರಾಗಿದ್ದಾರೆ.



ಜೂಹಿ ಎಂದರೆ ಪಂಜಾಬಿಯಲ್ಲಿ ಮಲ್ಲಿಗೆ ಎಂದರ್ಥ. ಈ ಮಲ್ಲಿಗೆ (ಜೂಹಿ) ಈಗ ಬಣ್ಣದ ತೋಟದಲ್ಲಿ ಅರಳಿ ನಿಂತಿದ್ದಾಳೆ. ಯಶಸ್ಸಿನ ಅಲೆಯಲ್ಲಿ ತೇಲುತ್ತಿದ್ದಾಳೆ.

ದೂರದರ್ಶನದಲ್ಲಿ ಈಗ ಪ್ರಸಾರವಾಗುತ್ತಿರುವ 'ಮಹಾಭಾರತ'ದಲ್ಲಿ ದ್ರೌಪದಿಯಾಗಿ ಜೂಹಿ ಅಭಿನಯಿಸಬೇಕಿತ್ತು. ಆದರೆ ಈಕೆ ಪಾತ್ರವನ್ನು ನಿರಾಕರಿಸಿದ್ದಾಳೆ. ಯಾಕೆಂದರೆ ಮಹಾಭಾರತದ ಕೊನೆ ಕೊನೆಗೆ ದ್ರೌಪದಿಗೆ ವಯಸ್ಸಾದ ರೀತಿಯಲ್ಲಿ ತೋರಿಸುವುದರಿಂದ ಟೀನೇಜ್‌ನ ಹುಡುಗಿಯಾಗಿ ಚಿತ್ರಗಳಲ್ಲಿ ಕಾಣಿಸಿಕೊಳ್ಳುವ ಆಕೆಗೆ ದ್ರೌಪದಿಯ ಪಾತ್ರ ಯಾವ ರೀತಿಯಲ್ಲಿ ಹೊಂದಬಹುದು ಎಂದು ಹಲವರು ಟೀಕಿಸಿದ್ದರು.

"ಕಮಲ್‌ಹಾಸನ್ ನನ್ನ ಮೆಚ್ಚಿನ ನಟ" ಎನ್ನುವ ಜೂಹಿಗೆ ಲವ್ ಸ್ಟೋರಿಗಳೆಂದರೆ ಬಲು ಇಷ್ಟವಂತೆ.

ಸುಂದರ ಶರೀರದ, ಮಲ್ಲಿಗೆ ಹೂ ಅರಳುವಂತೆ ನಗುವ ಜೂಹಿಗೆ ಬಾಂಬೆ ಫಿಲಂ ಅವಾರ್ಡ್ ಕಮಿಟಿಯು "ನವೋದಿತ ತಾರೆ" ಎಂದು ಪ್ರಶಸ್ತಿ ನೀಡಿದೆ.

ಈಗ ಹಿಂದಿ ಚಿತ್ರರಂಗದಲ್ಲಿ ಅಧಿಕ ಬೇಡಿಕೆ ಇರುವ ಜೂಹಿ ಸಂಜಯದತ್ತ್, ರಿಶಿಕಪೂರ್, ಗೋವಿಂದರ ಜತೆ ಅಭಿನಯಿಸುತ್ತಿದ್ದಾಳೆ ರವಿಚಂದ್ರನ್‌ರ 'ಶಾಂತಿ ಕ್ರಾಂತಿ', ಕನ್ನಡ, ತೆಲುಗು, ತಮಿಳು, ಹಿಂದಿ ಭಾಷೆಗಳಲ್ಲಿ ತಯಾರಾಗುತ್ತಿರುವುದರಿಂದ ಈಕೆ ಚತುರ್ಭಾಷಾ ತಾರೆಯಾಗಲಿದ್ದಾಳೆ. ಹಿಂದಿ ಚಿತ್ರರಂಗದಲ್ಲಿ ಮಿಂಚಬೇಕೆನ್ನುವ ಆಸೆ ಹೊಂದಿದ್ದ ಜೂಹಿಯ ಆಸೆ ಈಗ ನೆರವೇರಿದಂತಾಗಿದೆ.

ಮೊದಲ ಚಿತ್ರ ಗೋತಾ ಹೊಡೆದು ಕಂಗಾಲಾಗಿದ್ದ ಜೂಹಿ, ಈಗ ಒಂದು ಚಿತ್ರದ ಯಶಸ್ಸಿನೊಂದಿಗೆ ಯಶಸ್ವೀ ತಾರೆಯಾದುದು ನೋಡಿದರೆ ಈಕೆಯ ಅದೃಷ್ಟ ಚಕ್ರ ಈಗ ತಿರುಗಲಾರಂಭಿಸಿದೆ ಎನ್ನಬಹುದು.

—ಶಿ. ಪ್ರ. ಬದಿಯಡ್ಕ

ಹೊಸ ತುಳು ಚಿತ್ರ ಕೋಡ್ಲು ಸಾಹಸ

ಕೆ. ಆರ್. ಫಿಲಂಸ್‌ರವರು ತಮ್ಮ ಪ್ರೊಡಕ್ಷನ್ಸ್ ನಂ:1, ತುಳು ಹಾಗೂ ಕನ್ನಡ ವರ್ಣ ಚಿತ್ರವನ್ನು ಏಕಕಾಲದಲ್ಲಿ ನಿರ್ಮಿಸಲಿದ್ದಾರೆ ತುಳು ಚಿತ್ರರಂಗದಲ್ಲೇ ಪ್ರಥಮ ಬಾರಿಗೆ ಕೌತುಕಮಯ, ಸಸ್ಪೆನ್ಸ್ ಚಿತ್ರ ಇದಾಗಲಿದೆ ಎಂಬ ನಿರೀಕ್ಷೆ ಇದೆ. ಇದೇ ತಿಂಗಳು ಎರಡನೆಯ ವಾರದಿಂದ ಮಂಗಳೂರು ಮತ್ತು ಬೆಂಗಳೂರಿನಲ್ಲಿ ಚಿತ್ರೀಕರಣ ಪ್ರಾರಂಭಗೊಂಡು ಒಂದೇ ಹಂತದಲ್ಲಿ ಮುಕ್ತಾಯಗೊಳ್ಳಲಿದೆ.

"ಬಿಸಿಲು ಬೆಳದಿಂಗಳು" ಚಿತ್ರದ ತರುಣ ನಿರ್ದೇಶಕ ಕೋಡ್ಲು ರಾಮಕೃಷ್ಣ ತುಳು ಚಿತ್ರ ನಿರ್ದೇಶಿಸಲಿದ್ದಾರೆ. ತಾರಾಗಣದಲ್ಲಿ: ಅವಿನಾಶ್ ವೆಂಕಟೇಶ್ ಪ್ರಸಾದ್ ಸುಂದರಕೃಷ್ಣ ಅರಸ್, ಮುಖ್ಯಮಂತ್ರಿ ಚಂದ್ರು, ನಟಿಸಲಿದ್ದು, ನಾಯಕಿ ಪಾತ್ರದ ಅನ್ವೇಷಣೆ ನಡೆದಿದೆ. ಎಸ್.ಎನ್.ಬಿ. ಮೂರ್ತಿಯವರು ಛಾಯಾಗ್ರಹಣ ಜೋಕಿ ಮತ್ತು ವಿನ್ಸೆಂಟ್ (ವಿಕ್ಕಿ)ರ ಸಂಗೀತ ನಿರ್ದೇಶನ, ಬಿ.ಗುರುರಾಜ್ ಸಹ ನಿರ್ದೇಶನ ಈ ಚಿತ್ರಕ್ಕಿದ್ದು, ನರಸಿಂಹ ಅಯ್ಯಂಗಾರ್, ಚಂದ್ರಿಕಾ ಮತ್ತು ಶ್ರೀಮತಿ ಸ್ಮಿತಾ ರಾಮಕೃಷ್ಣ ಚಿತ್ರವನ್ನು ನಿರ್ಮಿಸುತ್ತಿದ್ದಾರೆ.

ವಿಷ್ಣು ಜತೆ ಖುಷ್‌ಬೂ: ದಾಸ್ ಹೊಸ ಚಿತ್ರ

"ದಾಸ" ಚಿತ್ರವೆಂದರೆ ಮಾಸ್‌ಗೆ ಮಸಾಲೆ ನೀಡಿ ಯಶಸ್ವಿಯಾಗುವುದು ಕಟ್ಟಿಟ್ಟ ಬುತ್ತಿ. ಸಾಹಸ ಪ್ರಧಾನ ಚಿತ್ರಗಳ ನಿರ್ದೇಶನಕ್ಕೆ ಹೆಸರಾದ ಕೆ.ಎಸ್.ಆರ್. ದಾಸ್ ಅವರು ಕಥೆ ಚಿತ್ರಕಥೆ ಬರೆದು ನಿರ್ದೇಶಿಸಲಿರುವ ಹೊಸ ಚಿತ್ರದಲ್ಲಿ ವಿಷ್ಣುವರ್ಧನ್-ಖುಷ್‌ಬೂ ಜೋಡಿಯಾಗಿ ನಟಿಸಲಿದ್ದಾರೆ.

ಕೆ.ಎಸ್.ಆರ್. ದಾಸ್ ಪುತ್ರ "ಸುಕುಮಾರ್ ಆರ್ಟ್ ಕಂಬೈನ್ಸ್" ಲಾಂಛನದಲ್ಲಿ ನಿರ್ಮಿಸಲಿರುವ ಈ ಚಿತ್ರಕ್ಕೆ ಜನವರಿ ಎರಡನೇ ವಾರದಲ್ಲಿ ಚಕ್ರವರ್ತಿ ರಾಗ ಸಂಯೋಜನೆಯಲ್ಲಿ ಹಾಡುಗಳ ಧ್ವನಿಮುದ್ರಣ ಕಾರ್ಯವೂ, ಮೂರನೇ ವಾರದಲ್ಲಿ ಚಿತ್ರೀಕರಣವೂ ಆರಂಭವಾಗಲಿದೆ. "ಸುಪ್ರಭಾತ" ಚಿತ್ರದ ಯಶಸ್ಸಿನ ಸೂತ್ರಧಾರರಾದ ಸಹ ನಿರ್ದೇಶಕ ಪಿ. ಆರ್. ಭಾಸ್ಕರ್ ಅವರು ಮಣಿ ಅವರೊಡಗೂಡಿ ಈ ಚಿತ್ರಕ್ಕೆ ಮೊದಲ ಬಾರಿಗೆ ಸಂಭಾಷಣೆಯನ್ನು ಬರೆಯುತ್ತಿದ್ದಾರೆ. ಚಿತ್ರದ ಉಳಿದ ತಾರಾಬಳಗದ ಆಯ್ಕೆ ನಡೆಯುತ್ತಿದೆ. ಛಾಯಾಗ್ರಾಹಕರು "ವೈದಿ" ಸ್ವಾತಿ ಲಕ್ಷ್ಮಣ್.

ಸಾಂಗ್ಲಿಯಾನ ನಿರ್ದೇಶಕರ 'ಮೃತ್ಯುಂಜಯ'

"ಸಾಂಗ್ಲಿಯಾನ" ಮೊದಲ ನಿರ್ದೇಶನದಲ್ಲೆ ಸಾಕಷ್ಟು ಹೆಸರು, ಯಶಸ್ಸು ಗಳಿಸಿದ ತರುಣ ನಿರ್ದೇಶಕ ಪಿ. ನಂಜುಂಡಪ್ಪ ಅವರಿಗೆ ಅದ್ದೂರಿ ಚಿತ್ರವೊಂದನ್ನು ನಿರ್ದೇಶಿಸುವ ಅದೃಷ್ಟ ಒದಗಿ ಬಂದಿದೆ. "ಬಣ್ಣದ ಗೆಜ್ಜೆ" ತೆಲುಗು ಆವೃತ್ತಿಯ ನಿರ್ಮಾಪಕರಾದ ಸಾಂಬಶಿವರಾವ್ ಅವರು "ಅಮು ಪಮು ಆರ್ಟ್ಸ್" ಲಾಂಛನದಲ್ಲಿ ನಿರ್ಮಿಸಲಿರುವ "ಮೃತ್ಯುಂಜಯ" ಸಿನಿಮಾಸ್ಕೋಪ್ ವರ್ಣ ಚಿತ್ರವನ್ನು ಪಿ. ನಂಜುಂಡಪ್ಪ ನಿರ್ದೇಶಿಸಲಿದ್ದು ಆರ್. ಮಧುಸೂಧನ್ ಛಾಯಾಗ್ರಾಹಕರಾಗಿ ಕೆಲಸ ನಿರ್ವಹಿಸಲಿದ್ದು ಇತ್ತೀಚೆಗೆ ಚಿತ್ರರಸಿಕರ ಕ್ರೇಜೀ ಸ್ಟಾರ್ ಆಗಿರುವ ರವಿಚಂದ್ರನ್ ನಾಯಕ ನಟರಾಗಿ ನಟಿಸಲಿರುವ ಈ ಚಿತ್ರದಲ್ಲಿ ರಾಧ-ವಿಜಯಶಾಂತಿ ನಾಯಕಿಯರಾಗಿ ಅಭಿನಯಿಸಲಿದ್ದಾರೆ.

ವಿಚಿತ್ರಾಯಣ

ಟಾಕೀಸಿನಲ್ಲಿ ತಗಣೆಗಳಿದ್ದರೂ ನೋಡಬಹುದಾದಂತಹ ಚಿತ್ರ...—ಸ್ತ್ರೀ ಮಾಸ ಪತ್ರಿಕೆ

*50% ತೆರಿಗೆ ವಿನಾಯಿತಿ ಇಲ್ಲ

ಧರ್ಮಕ್ಕೊಲಿದ ಪತಿ

ನಿರ್ದೇಶನ: ನಾರಿ
ನಿರ್ಮಾಣ: ಪ್ರ.ಭಾ.ವರದಕ್ಷಿಣೆ ವಿರೋಧಿ ಸಂಘ
ಸಂಗೀತ: ಪುತ್ತೂರು ರಾಣಿ ಚೆನ್ನಮ್ಮ

ಕರ್ನಾಟಕದ ಎರಡನೇ ಕ್ಯಾಸೆಟ್ ಕಂಪನಿ

ದಿನೇ-ದಿನೇ ಪ್ರಬುದ್ಧಮಾನವಾಗಿ ಬೆಳೆಯುತ್ತಿರುವ ಕನ್ನಡ ಚಿತ್ರರಂಗದಲ್ಲಿ ಹಿಂದಿನ [illegible]ಯನ್ನು ತೆಗೆದುಕೊಂಡು ಕನ್ನಡದ ಬೆಳವಣಿಗೆಯನ್ನು ತುಲನೆ ಮಾಡಿದಾಗ ಹಲವಾರು ಬದಲಾವಣೆಗಳಾಗಿರುವುದು [illegible]. ತಾಂತ್ರಿಕ ದೃಷ್ಟಿಯಲ್ಲಿ ಹಾಡುಗಳ ಧ್ವನಿಮುದ್ರಣ ಕೇಂದ್ರಗಳು, ಡಬ್ಬಿಂಗ್ ಕೇಂದ್ರ, ಕಲರ್ ಲ್ಯಾಬ್ ಇತ್ಯಾದಿ [illegible] ಕೆಲವೇ ವರ್ಷಗಳಲ್ಲಿ [illegible]. ಕನ್ನಡ ನಿರ್ಮಾಪಕರು [illegible] ಗುಣಮಟ್ಟವಾಗಿ [illegible] ಮಾಡುವುದು [illegible] ಚಿತ್ರ [illegible] ವಿಚಾರವೇ ಆಗಿದೆ. ಆಡಿಯೋ ಕ್ಯಾಸೆಟ್‌ಗಳ ವಿಚಾರವನ್ನೆತ್ತಿಕೊಂಡು ಹೊರಟರೆ, 'ಲಹರಿ ಕ್ಯಾಸೆಟ್ಸ್ ಕಂಪನಿ' ಕರ್ನಾಟಕದಲ್ಲಿ ಹುಟ್ಟಿಕೊಂಡು ಈಗಾಗಲೇ ಹೆಸರು ಮಾಡಿದೆ.

ಈ ಕಂಪನಿಯ ನಂತರ ಇದೀಗ ಹುಟ್ಟಿಕೊಂಡಿರುವ ಮತ್ತೊಂದು ಕ್ಯಾಸೆಟ್ ಕಂಪನಿ ಎಂದರೆ "ಎಂಪೈರ್ ರೆಕಾರ್ಡಿಂಗ್ ಕಂಪನಿ". ಕೆಲವು ತಿಂಗಳ ಹಿಂದೆಯಷ್ಟೇ ಹುಟ್ಟಿಕೊಂಡು ತನ್ನ ಕಾರ್ಯವನ್ನಾರಂಭಿಸಿದ ಈ ಕ್ಯಾಸೆಟ್ಸ್ ಕಂಪನಿ ಕನ್ನಡ ಚಿತ್ರರಂಗದ ಎರಡನೇ ಕ್ಯಾಸೆಟ್ ಕಂಪೆನಿಯಾಗಲಿದೆ. ಈಗಾಗಲೇ "[illegible]" "ಏನ್ ಸ್ವಾಮಿ ಅಳಿಯಂದಿರೆ" "[illegible] ವೀರ" "ಜಾಕಿ" "ಮನ್ಮಥರಾಜ" ಮುಂತಾದ ಚಿತ್ರಗಳ ಹಾಡುಗಳ ಕ್ಯಾಸೆಟ್‌ಗಳನ್ನು ಬಿಡುಗಡೆ ಮಾಡಿರುವ ಈ ಕಂಪನಿ ಇನ್ನೆರಡು ತಿಂಗಳಲ್ಲಿ 17ಕ್ಕೂ ಹೆಚ್ಚು ಕನ್ನಡ ಚಿತ್ರಗಳ ಹಾಡುಗಳ ಕ್ಯಾಸೆಟ್‌ಗಳನ್ನು ಬಿಡುಗಡೆ ಮಾಡಲಿದೆ.

ರಾಮ್ ಪಿ. ಕಪಾಯಿ, ದಿಲೀಪ್ ಕುಮಾರ್ ಹಾಗೂ ಅಶೋಕ್ ಸಹಿತಾ ಅವರು ಈ ಕಂಪೆನಿಯನ್ನು ಹುಟ್ಟುಹಾಕಿದ್ದು, ಕನ್ನಡ ಚಿತ್ರರಂಗದೊಡನೆ ಸೌಹಾರ್ದಯುತ ವಿಶ್ವಾಸ ಗಳಿಸಿಕೊಂಡು ಇದನ್ನು ದಕ್ಷಿಣ ಭಾರತದ ಪ್ರತಿಷ್ಠಿತ ಕ್ಯಾಸೆಟ್ ಕಂಪೆನಿಯನ್ನಾಗಿ ಮಾಡಲು ಶ್ರಮಿಸುವುದಾಗಿ ಈ ಕಂಪೆನಿಯ ನಿರ್ಮಾತೃಗಳು ತಿಳಿಸಿದ್ದಾರೆ.

ಕನ್ನಡಕ್ಕೆ 'ಲಕ್ಷ್ಮೀಕಾಂತ್ ಪ್ಯಾರೇಲಾಲ'

"ಸೌಭಾಗ್ಯ ಲಕ್ಷ್ಮಿ" "ರಾಮಣ್ಣ ಶಾಮಣ್ಣ" ಚಿತ್ರಗಳ ನಿರ್ಮಾಪಕ ಎಸ್. ಪಿ. ರಾಜಶೇಖರ್ "ಶ್ರೀ ವಾಸು ಚಿತ್ರ" ಲಾಂಛನದಲ್ಲಿ ಅರಣ್ಯದ ಹಿನ್ನೆಲೆಯಲ್ಲಿ ನಿರ್ಮಿಸಲಿರುವ "ಅರಣ್ಯದಲ್ಲಿ ಅಭಿಮನ್ಯು" ಸಿನಿಮಾಸ್ಕೋಪ್ ವರ್ಣ ಚಿತ್ರಕ್ಕೆ ಹಿಂದಿ ಚಿತ್ರರಂಗದ ಖ್ಯಾತ ಸಂಗೀತ ನಿರ್ದೇಶಕರಾದ ಲಕ್ಷ್ಮೀಕಾಂತ್ ಪ್ಯಾರೇಲಾಲ್ ಅವರು ಸಂಗೀತ ಸಂಯೋಜನೆ ನೀಡಲಿದ್ದಾರೆ. ಈ ತಿಂಗಳ 17-18ರಂದು ಚಾಮುಂಡೇಶ್ವರಿ ಸ್ಟುಡಿಯೋದಲ್ಲಿ ಗೀತಪ್ರಿಯ, ದೊಡ್ಡರಂಗೇಗೌಡ, ರುದ್ರಮೂರ್ತಿ ಶಾಸ್ತ್ರಿ, ಮನೋಹರ್ ಹಾಗೂ ಶ್ಯಾಮಸುಂದರ ಕುಲಕರ್ಣಿ ಬರೆದಿರುವ ಒಟ್ಟು ಆರು ಹಾಡುಗಳನ್ನು ಎಸ್.ಪಿ. ಬಾಲಸುಬ್ರಮಣ್ಯಂ ಚಿತ್ರಾ ಅವರ ಕಂಠಸಿರಿಯಲ್ಲಿ ಧ್ವನಿಮುದ್ರಿಸಿಕೊಳ್ಳಲಾಗುವುದು.

"ಅರಣ್ಯದಲ್ಲಿ ಅಭಿಮನ್ಯು"ವಾಗಿ ಅಂಬರೀಷ್ ವಿಶಿಷ್ಟ ಪಾತ್ರದಲ್ಲಿ ನಟಿಸಲಿರುವ ಈ ಚಿತ್ರದಲ್ಲಿ ಮುಂಬೈನ ದೇಹಾ ವಾಸವಿ ಎಂಬವಳು ನಾಯಕ ನಟಿಯಾಗಿ ನಟಿಸಲಿದ್ದಾಳೆ. 1989 ಜನವರಿ 1 ಹೊಸ ವರ್ಷದಲ್ಲಿ ಹೊಸ ಹರ್ಷದೊಡನೆ ಕಂಠೀರವ ಸ್ಟುಡಿಯೋದಲ್ಲಿ ಚಿತ್ರೀಕರಣ ಆರಂಭಗೊಳ್ಳಲಿದೆ.



'ಇಂದ್ರಜಿತ್' — ಅಂಬರೀಶ್ ಮತ್ತು ದೀಪಿಕಾ